ಚೆನ್ನವೀರ ಕಣವಿ



ಹೂವು ಹೊರಳುವವು ಸೂರ್ಯನ ಕಡೆಗೆ



HOOVU HORALUVAVU SOORYANA KADEGE - a collection of selected Lyrics in Kannada by Chennaveera Kanavi, Published by Talukina Venkaniah Smaraka Granthamale, Bangaluru.
Pages : x + 110

ವಿಸ್ತೃತ ಐದನೆಯ ಮುದ್ರಣ : ೨೦೧೬

ಮುಖಪುಟ : ಸುಧಾಕರ ದರ್ಬೆ

ಬೆಲೆ : ರೂ.60-00

ಅಕ್ಷರ ಜೋಡಣೆ : ಲೇಖಾ ಗ್ರಾಫಿಕ್ಸ್, ಮೈಸೂರು.
ಮುದ್ರಣ : ಸ್ವಾನ್ ಪ್ರಿಂಟರ್ಸ್, ಬೆಂಗಳೂರು.

ಎರಡು ಮಾತು

ನಾನು ವಿದ್ಯಾರ್ಥಿಯಾಗಿದ್ದಾಗ ಧಾರವಾಡದಲ್ಲಿ ಯಾವುದೇ ಸಭೆ, ಸಮಾರಂಭ ನಡೆದರೂ ಕಾವ್ಯ ಗಾಯನವಿಲ್ಲದೆ ಮುಕ್ತಾಯಗೊಳ್ಳುತ್ತಿರಲಿಲ್ಲ. ಅದು ಸೃಷ್ಟಿಸು ತ್ತಿದ್ದ ವಾತಾವರಣ, ಜನಸಮೂಹ ಅದರಿಂದ ಪಡೆಯುತ್ತಿದ್ದ ಸಂತೋಷ ಸಹಜವಾಗಿಯೇ ಕೇಳುಗರಲ್ಲಿ ಕಾವ್ಯಾಭಿರುಚಿಯನ್ನು ಹುಟ್ಟಿಸುವಂತಿತ್ತು. ನವೋದಯ ಕಾಲದ ಗೀತ ಸಂಸ್ಕಾರ ಇಂದಿಗೂ ನನ್ನಲ್ಲಿ ಕೆಲ ಮಟ್ಟಿಗಾದರೂ ಉಳಿದುಕೊಂಡು ಬಂದಿರುವುದರಿಂದ ಆ ಕಾಲ ಹೋಯಿತು ಎಂದು ನಿಟ್ಟಿಸಿರಿಡುವ ಪ್ರಸಂಗ ಈಗಲೂ ನನಗೆ ಬಂದಿಲ್ಲವೆಂದೇ ಹೇಳಬೇಕು. ಹಾಗೆಯೇ ಕವಿಯ ಪ್ರಭಾವ ಪೂರ್ಣ ಕಾವ್ಯ ವಾಚನದ ಸರ್ವಗ್ರಾಹಿ ಸಮ್ಮೋಹಕ ಶಕ್ತಿಗೆ ಮೊದಲ ಮನ್ನಣೆಯನ್ನು ನಾನು ಎಂದೂ ಅಲ್ಲಗಳೆದಿಲ್ಲ.

ಇತ್ತೀಚೆಗೆ ಕೆಲವರ್ಷಗಳಿಂದ, ಪ್ರಯೋಗಶೀಲರಾದ ಕೆಲವು ಕಲಾವಿದರು ಭಾವಗೀತೆಗಳ ಹಾಡುಗಾರಿಕೆಗೆ ಮತ್ತೆ ಹೊಸ ಚೈತನ್ಯ ಬರುವಂತೆ ಮಾಡಿರುವುದು ಹರ್ಷದಾಯಕವಾದದ್ದು. ಸಾಹಿತ್ಯ ರಸಿಕತೆ ಹಾಗೂ ಸಂಗೀತ ಕೌಶಲ್ಯ ಎರಡೂ ಹದವಾಗಿ ಮೇಳವಿಸಿದ ಹಾಡುಗಾರಿಕೆ ಮಾತ್ರ ಕಾವ್ಯಾನುಭವವನ್ನು ಪರಿಣಾಮ ಕಾರಿಯಾಗಿ ಮುಟ್ಟಿಸಬಲ್ಲುದು. ಆದುದರಿಂದ ಬರಿಯ ಹಾಡಿಗೆ ರಂಜಕವಾಗಿರದೆ ಓದಿನಲ್ಲಿಯೂ ಸತ್ತ್ವಪೂರ್ಣವಾಗಿರುವ ಕವಿತೆಗಳನ್ನು ಕಲಾವಿದರು ತಮ್ಮ ಅನುಭವದಿಂದ ಗುರುತಿಸಿಕೊಳ್ಳಬೇಕಾದುದು ಅವಶ್ಯವೆಂದು ತೋರುತ್ತದೆ.

ಇಲ್ಲಿ ಸಂಕಲನಗೊಂಡಿರುವ ನಲವತ್ತೆರಡು ಭಾವಗೀತೆಗಳಲ್ಲಿ ಹತ್ತನ್ನು ಬಿಟ್ಟರೆ ಉಳಿದವೆಲ್ಲ ಈ ಮೊದಲಿನ ನನ್ನ ಕವನ ಸಂಗ್ರಹ ಗಳಿಂದ ಆಯ್ದುಕೊಂಡವುಗಳು. ಇವುಗಳಲ್ಲಿ ಕೆಲವನ್ನು ಆಗಾಗ ಸಭೆ

ಸಮಾರಂಭಗಳಲ್ಲಿ ಹಾಗೂ ಆಕಾಶವಾಣಿ ಮತ್ತು ದೂರದರ್ಶನ ಕೇಂದ್ರಗಳ ಮೂಲಕ ಹಾಡಿ. ತಮ್ಮ ಕಂಠಮಾಧುರ್ಯದಿಂದ ಸಹೃದಯ ಶ್ರೋತೃಗಳನ್ನು ತಣಿಸಿದ, ತಣಿಸುತ್ತಿರುವ ಕಲಾವಿದರನ್ನು ನಾನಿಲ್ಲಿ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತೇನೆ. ಈ ಸಂಕಲನಕ್ಕೆ ಹೆಸರು ಕೊಟ್ಟಿರುವ 'ಹೂವು ಹೊರಳುವವು ಸೂರ್ಯನ ಕಡೆಗೆ' ಎಂಬ ಕವಿತೆ ಬೆಂಗಳೂರು ದೂರದರ್ಶನದಲ್ಲಿ ಗೀತ - ಚಿತ್ರವಾಗಿ ಮೂಡಿದಾಗ ತಮ್ಮ ಮೆಚ್ಚುಗೆ ಸೂಚಿಸಿದ ರಸಿಕವೃಂದಕ್ಕೂ ನನ್ನ ಧನ್ಯವಾದಗಳು.

ನನ್ನ ಭಾವಗೀತೆಗಳ ಮೊದಲ ಧ್ವನಿಸುರುಳಿ 'ಮಲ್ಲಿಗೆ ದಂಡೆ'ಯ ಸಂಗೀತ ನಿರ್ದೇಶಕರೂ 'ಸಂಗೀತ ಗಂಗಾ' ಸಂಸ್ಥೆಯ ಅಧ್ಯಕ್ಷರೂ ಆದ ಶ್ರೀ ಜಿ.ವಿ. ಅತ್ರಿಯವರಿಗೆ ನಾನು ತುಂಬ ಋಣಿಯಾಗಿದ್ದೇನೆ. ಹಾಗೆಯೇ ಕನ್ನಡದಲ್ಲಿ ಸುಗಮ ಸಂಗೀತ ಪ್ರವರ್ಧಮಾನಕ್ಕೆ ಬರುವಂತೆ ವಿಶೇಷ ಶ್ರಮ ವಹಿಸುತ್ತಿರುವ 'ಧ್ವನಿ' ಸಂಸ್ಥೆಯ ಶ್ರೀ ಸಿ. ಅಶ್ವತ್ಥ, ಸಾಧನಾ ಸಂಗೀತ ಶಾಲೆಯ ಶ್ರೀಮತಿ ಮಂಜುಳಾ ಗುರುರಾಜ್, ಆದರ್ಶ ಸುಗಮ ಸಂಗೀತ ಅಕಾಡೆಮಿಯ ಶ್ರೀ ಕೃಷ್ಣಮೂರ್ತಿ ಕಕ್ಕೇರಿ, ಶ್ರೀ ಯಶವಂತ ಹಳಬಂಡಿ, ದೂರದರ್ಶನದಲ್ಲಿ 'ಗೀತಮಾಧುರಿ' ಮಾಲಿಕೆಯನ್ನು ಸಾದರಪಡಿಸಿದ ನಿರ್ದೇಶಕ ಶ್ರೀ ಟಿ.ಎಸ್.ನಾಗಾಭರಣ ಮೊದಲಾದವರನ್ನು ಮತ್ತು ಸಂಗೀತ ಕಲಾವಿದರನ್ನು ಈ ಸಂದರ್ಭದಲ್ಲಿ ಪ್ರೀತಿಯಿಂದ ನೆನೆಯುತ್ತೇನೆ.

ಈ ಸಂಗ್ರಹದ ಮೂರನೆಯ ಆವೃತ್ತಿಯನ್ನು ಪ್ರಕಟಿಸುವಲ್ಲಿ ಹೆಚ್ಚಿನ ಆಸ್ಥೆ ವಹಿಸಿದ ಸಮಾಜ ಪುಸ್ತಕಾಲಯದ ಶ್ರೀ ಮನೋಹರ ಘಾಣೇಕರ ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ಜೂನ್ ೨೮, ೧೯೯೮ *ಚೆನ್ನವೀರ ಕಣವಿ*

ವಿಸ್ತೃತ ಆವೃತ್ತಿಗಾಗಿ

ಹಿಂದಿನ ಆವತ್ತಿಯೊಂದಿಗೆ ಮತ್ತೆ ಇಪ್ಪತ್ತೊಂದು ಭಾವಗೀತೆಗಳನ್ನೊಳಗೊಂಡು ಈ ವಿಸ್ತೃತ ಆವೃತ್ತಿ ಪ್ರಕಟವಾಗುತ್ತಿದೆ. ಈ ಹೆಚ್ಚಿನ ಕವನಗಳು ಕೂಡ ನನ್ನ ವಿವಿಧ ಸಂಕಲನಗಳಿಂದ ಆಯ್ದವುಗಳೆ ಆಗಿವೆ.

ಎರಡು ವರ್ಷಗಳ ಹಿಂದೆ ಕಾರ್ಕಳದ ಸಾಹಿತ್ಯ ಸಂಘದ ಸಮಾರಂಭವೊಂದರಲ್ಲಿ ಖ್ಯಾತ ಗಾಯಕರಾದ ಶ್ರೀ ಚಂದ್ರಶೇಖರ ಕೆದಿಲಾಯ ಅವರು ನನ್ನ 'ಆಕಾಶಬುಟ್ಟಿ' ಕವಿತೆಯನ್ನು ಹಾಡಿ ಸಭಿಕರ ಮೆಚ್ಚುಗೆ ಗಳಿಸಿದಾಗ ಕಾವ್ಯಗಾಯನದ ಮತ್ತೊಂದು ಸಾಧ್ಯತೆ ನನಗೆ ಗೋಚರಿಸಿತು. 'ಮಾಡುವವನದಲ್ಲ ಕವಿತೆ, ಹಾಡುವವನದು' ಎಂದು ಪು.ತಿ.ನ. ಅವರು ಹೇಳಿದ್ದು ಬಹುಶಃ ಇದಕ್ಕೇ ಎಂದು ತೋರುತ್ತದೆ. ಈ ಹೊಸ ಆವೃತ್ತಿ ಇಷ್ಟೊಂದು ಹಿಗ್ಗಿರುವುದಕ್ಕೆ ಅದೂ ಒಂದು ಕಾರಣ.

ನನ್ನ 'ಮಲ್ಲಿಗೆ ದಂಡೆ' (ಸಿಬಿಎಸ್), 'ಮಧುಕೋಗಿಲೆ' (ಸಂಗೀತಾ) ಹಾಗೂ 'ಒಂದು ಮುಂಜಾವು' (ಲಹರಿ) ಧ್ವನಿಸುರುಳಿಗಳಲ್ಲಿಯ ಕವಿತೆಗಳನ್ನು ಈ ಸಂಗ್ರಹ ಒಳಗೊಂಡಿದೆ.

ಏಳು ವರ್ಷಗಳ ಹಿಂದೆಯೇ ಚಿನ್ನದ ಹಬ್ಬವನ್ನು ಆಚರಿಸಿದ ತಳುಕಿನ ವೆಂಕಣ್ಣಯ್ಯ ಗ್ರಂಥಮಾಲೆಯ ಶ್ರೀ ಟಿ.ಎಸ್. ಛಾಯಾಪತಿಯವರು ಈ ಸಂಕಲನವನ್ನು ಪ್ರಕಟಿಸುವಲ್ಲಿ ಹೆಚ್ಚಿನ ಆಸ್ಥೆ ವಹಿಸಿರುವುದು ನನಗೆ ಹೆಚ್ಚಿನ ಸಂತೋಷವನ್ನುಂಟು ಮಾಡಿದೆ. ಅವರಿಗೆ ನಾನು ತುಂಬ ಕೃತಜ್ಞ. ಮೊದಲಿನ ಮೂರು ಆವೃತ್ತಿಗಳನ್ನು ಪ್ರಕಟಿಸಿದ ಸಮಾಜ ಪುಸ್ತಕಾಲಯದ ಶ್ರೀ ಮನೋಹರ ಘಾಣೇಕರ ಅವರಿಗೆ ನನ್ನ ನೆನಕೆಗಳು.

ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಉದಯರವಿ ಮುದ್ರಣಾಲಯ ಅವರಿಗೂ ಮತ್ತು ಮುಖಪುಟ ವಿನ್ಯಾಸವನ್ನು ಚಂದವಾಗಿಸಿದ ಸುಧಾಕರ ದರ್ಬೆ ಅವರಿಗೂ ನನ್ನ ವಂದನೆಗಳು.

ಧಾರವಾಡ
೧-೨-೨೦೦೭

ಚೆನ್ನವೀರ ಕಣವಿ

ಈ ಆವೃತ್ತಿಗಾಗಿ

ನನ್ನ ಆಯ್ದ ಭಾವಗೀತೆಗಳ ಸಂಗ್ರಹ ಮತ್ತೆ ಮತ್ತೆ ಪುನರ್ಮುದ್ರಣಗೊಳ್ಳುತ್ತಿರುವುದು ಸಂತೋಷದ ಸಂಗತಿ. ಸುಗಮ ಸಂಗೀತದ ಜೀವಂತಿಕೆಯನ್ನು ಇದು ಎತ್ತಿ ತೋರಿಸುತ್ತಿದೆ ಎಂದು ನಾನು ಭಾವಿಸಿದ್ದೇನೆ. ಇದಕ್ಕೆ ಕಾರಣರಾದ ಎಲ್ಲ ಗಾಯಕರಿಗೂ ಸಹೃದಯ ರಸಿಕರಿಗೂ ನಾನು ಕೃತಜ್ಞ.

ಕಾವ್ಯರಚನೆ ಒಂದು ಸೃಷ್ಟಿಯಾದರೆ, ಕಾವ್ಯಗಾಯನ ಪ್ರತಿಸೃಷ್ಟಿಯ ಪ್ರಕ್ರಿಯೆ. ಸುಗಮ ಸಂಗೀತ ಆಧುನಿಕ ಕಾವ್ಯ ಹುಟ್ಟುಹಾಕಿದ, ಅಪರೂಪದ, ಸಾಹಿತ್ಯನಿಷ್ಠವಾದ ಸಂಗೀತ ಮಾದರಿ.

ಈ ಪುನರ್ಮುದ್ರಣವನ್ನು ಇಷ್ಟೊಂದು ಸುಂದರವಾಗಿ ಪ್ರಕಟಿಸಿ ತಮ್ಮ ಕಾವ್ಯಪ್ರೀತಿಯನ್ನು ವ್ಯಕ್ತಪಡಿಸುತ್ತಿರುವ ತ.ವೆಂ. ಸ್ಮಾರಕ ಗ್ರಂಥಮಾಲೆಯ ಶ್ರೀ ಟಿ.ಎಸ್. ಛಾಯಾಪತಿಯವರಿಗೆ ನಾನು ತುಂಬ ಆಭಾರಿಯಾಗಿದ್ದೇನೆ.

ಧಾರವಾಡ
ಆಗಸ್ಟ್ ೧೫, ೨೦೧೬

ಚೆನ್ನವೀರ ಕಣವಿ

ಪ್ರಕಾಶಕರ ಎರಡು ಮಾತು

'ಹೂವು ಹೊರಳುವವು ಸೂರ್ಯನ ಕಡೆಗೆ' ಚೆನ್ನವೀರಕಣವಿ ಅವರ ಅಪೂರ್ವ ಭಾವಗೀತೆಗಳ ಸಂಕಲನ, ನನಗೂ ಕಣವಿ ಅವರಿಗೂ ಸುಮಾರು ನಾಲ್ಕು ದಶಕಗಳ ಆತ್ಮೀಯವಾದ ನಂಟು. 2007ರಲ್ಲಿ ಅವರ ಹದಿನಾರು ಕವಿತಾ ಸಂಕಲನಗಳನ್ನು ಒಟ್ಟಿಗೆ ಪ್ರಕಟಿಸಿ ಬಿಡುಗಡೆ ಮಾಡಿದ ಹೆಮ್ಮೆ ನನ್ನದು. ಈ ಹೊತ್ತು ಪ್ರಸ್ತುತ ಭಾವಗೀತೆಗಳ ಸಂಕಲನವನ್ನು ಪ್ರೀತಿ ವಿಶ್ವಾಸಗಳಿಂದ ಹೊರ ತರುತ್ತಿದ್ದೇನೆ.

ಉತ್ತಮ ಮುದ್ರಣಕ್ಕೆ ಹೆಸರಾದ ಸ್ಕ್ಯಾನ್ ಪ್ರಿಂಟರ್ಸ್‌ನ ಕೃಷ್ಣಮೂರ್ತಿ, ಮುಖಪುಟ ಕಲಾವಿದರೂ, ನನ್ನ ಬಹುಕಾಲದ ಮಿತ್ರರೂ ಆದ ಸುಧಾರಕರ ದರ್ಬೆ ಅವರನ್ನು ಪ್ರೀತಿಯಿಂದ ನೆನೆಯುತ್ತೇನೆ.

ನನ್ನ ಮತ್ತು ಚೆನ್ನವೀರ ಕಣವಿ ಅವರ ಸ್ನೇಹಕ್ಕೆ ಕಾರಣ ರಾದವರು ರಾಷ್ಟ್ರಕವಿ ಜಿ.ಎಸ್.ಎಸ್. ಅವರ ಉಪಕಾರವನ್ನು ಪ್ರೀತಿಯಿಂದ ನೆನೆಯುತ್ತೇನೆ.

ಛಾಯಾಪತಿ

ಪರಿವಿಡಿ

ಕಾವ್ಯಾಕ್ಷಿ

ಆ ಗಿಡಾ, ಈ ಗಿಡಾ
ಒಂದೊಂದೂ ಚೇಂಗೊಡಾ;
ಬಾಂದೇವಿಗೆ
ನೆಲದಾಯಿಯ
ಹೂಗೊಂಡೆಯ ಹೊಂಗೊಡಾ.

ಯಾವ ಹಸಿರೋ, ಯಾವ ಹೆಸರೊ
ತರುಲತೆಗಳ ತೋರಣಾ;
ಬಂದುದೆಲ್ಲಿ?
ಬೆಳೆಯಿತೆಲ್ಲಿ?
ನಿಷ್ಕಾರಣ ಕಾರಣಾ.

ನೀಲಾಂಗಣ, ತಿರೆ ಕಂಕಣ
ಕೆಂದಳಿರಿನ ಕಾವಣಾ;
ಅಲ್ಲಿ ಇಲ್ಲಿ
ಎಲ್ಲೆಲ್ಲಿಯು
ಸವಿ ಹಾಡಿನ ರಿಂಗಣಾ.

ಹೂ ಹೂವಿಗೆ ದುಂದುಂಬಿಯ
ಮೈಕೈಗಳ ಸ್ಪರ್ಶನಾ;
ಅಪರಂಜಿಯ
ಅನುರಾಗದ
ಮಾಧುರ್ಯದ ಬಂಧನಾ.

ಮಾಂದಳಿರಿನ ಮೇಲ್ಮಾಳಿಗೆ
ಮಧುಕೋಗಿಲೆಗಾಸರಾ;
ಎದೆಯುಬ್ಬಿಸಿ
ಕುಕಿಲಿಡುತಿರೆ
ಎಲೆ ಎಲೆಗಳ ಮರ್ಮರಾ.

ಅಳಲುಸಿರಿಗೆ ಸುಸಿಲುಸಿರಿನ
ತಂಪಿನ ತಳಿ ಚಿಮುಕಲಾ;
ಹಾಲುಗಳ್ಳಿ
ಜೋಲುಬಳ್ಳಿ
ತೂಗು ಮಂಚ ಚಂಚಲಾ.

ಜುಳು ಜುಳು ನದಿ, ಕಲ ಕಲ ರುತಿ
ಜೋಗಳುದುಲಿ ಕೇಳಲಾ;
ವಿಶ್ವದೊಡಲ
ತಣಿಸಲೆಂದ
ಹಾಲ್ಜೇನಿನ ಮಳೆಯಲಾ.

ತಿರೆಯ ನವಿರು ಹುಲ್ಲು ಹಸಿರು
ಮಕಮಲ್ಲಿನ ಮುಸುಗಲಾ;
ಮುಗುದೆ ತನ್ನ
ಮನೆಗೆಲಸದಿ
ಗುಣು ಗುಣಿಸುವ ಹಾಡಲಾ.

ಹಕ್ಕಿ ಜೋಡಿ ಒಂದುಗೂಡಿ
ಉಲಿಯುತಿರುವ ಹುಮ್ಮಸಾ;

ಬನದ್ಯೆಸಿರಿ
ಕುಶಲಕುಂಚ
ಚಿತ್ರದಂತೆ ಹೊಸ ಹೊಸಾ,

ತನಗೆ ತಾನೆ ತಿಳಿಯದಂತೆ
ತುಳುಕಿತಹಹ ಭಾವನಾ;
ಕಮ್ಮಲರಿಗೆ
ಕವಿಗಾಳಿಗೆ
ಕಾವ್ಯಾಕ್ಷಿಗೆ ವಂದನಾ.

ಚಂದ್ರೋದಯ

ಪೂರ್ವ ದಿಙ್ಮಂಡಲದಿ, ಪುಣ್ಯವವತರಿಸುತಿದೆ -
ಪೂರ್ಣ ಚಂದ್ರೋದಯದ ರೂಪದಲ್ಲಿ;
ಪೂರ್ಣತೆಯು ಸಂಪೂರ್ಣ ಸಾಕಾರಗೊಳ್ಳುತಿದೆ -
ಪೌರ್ಣಿಮೆಯ ಪೂರ್ಣೇಂದು ವೇಷದಲ್ಲಿ.

ಬೈಗುಗೆಂಪಿನ ಬಣ್ಣ ಕಡಲಾಳ ತಳದಿಂದ
ಪುಟಿದೆದ್ದ ಮುತ್ತುಗಳ ಚೆಂಡಿನಂತೆ,-
ತಂಗದಿರನುದಯಿಸಿದ, ಶಾಂತಿಮತಿ ಬಿಂಬಿಸಿದ
ತಪಗೊಂಡ ಮೌನವ್ರತಧಾರಿಯಂತೆ.

ಹೊನ್ನಕೇದಗೆ ಹುಡಿಯ ಇಡಿಕಿರಿದು ತುಂಬಿರುವ
ಹೊಂಗನಸು ಹೂತಿರುವ ಭರಣಿಯಂತೆ -
ದುಂಡುಮೊಗ ಸುಂದರನು, ಮೂಡಿರುವ ಚಂದಿರನು
ಬಾನು-ಬುವಿಗಳ ಬಯಕೆ ಹಣ್ಣಿನಂತೆ.

ಆನಂದ ನಂದನನೊ, ಚಂದನದಿ ಮಿಂದವನೊ
ಉದಯಗಿರಿ ಹೊಂದೇರನೇರಿದವನು;
ನಂದನದ ವನದಲ್ಲಿ ಹೂವಾಗಿ ಬೆಳೆದವನೊ
ಒಡಲಲ್ಲಿ ಸುಧೆಯನ್ನು ತುಂಬಿದವನು.

ಮಂದಹಾಸದ ಚಂದ್ರಹಾಸ ತನಿವೆಳಕಾಗಿ
ಮೆಲ್ಲಮೆಲ್ಲನೆ ಇಳೆಯನಪ್ಪುತಿಹುದು;
ಬನ, ಬಯಲು, ಗಿರಿಸಾನು, ಊರು, ದೂರದ ಕಾನು
ಮಧುಕುಡಿದು ಮತ್ತೇರಿ ಮಲಗಿರುವವು.

ಬಿಡುಗಣ್ಣ ಬಾಲೆ

ಬಿಡುಗಣ್ಣ ಬಾಲೆ ನೀನಾವ ಬೆಳುದಿಂಗಳನು
ಬಂಧಿಸಿಹೆ ಕಣ್ಣನುಣ್ಬೊಗರಿನಲ್ಲಿ?
ಹೂಬಟ್ಟಲಿಂದ ಹಿಂದಿರುಗುತಿಹ, ಝೇಂಕಾರ-
ಗೈಯುತಿಹ ಭೃಂಗ ಕಣ್ಣಾಲಿಯಲ್ಲಿ.

ಅಮಿತ ಸುಖ ಸೂಸುತಿದೆ ನವನವೋನ್ಮೇಷದಲಿ
ನೋಟ ನಿಬ್ಬೆರಗಿನಲಿ, ನೀರವದಲಿ;
ದಿವ್ಯ ಬಯಕೆಯ ಹಣ್ಣು ಹಾಲಾಗಿ ಜೇನಾಗಿ
ಸುರಿಯುತಿದೆ ನುಣ್ಗದಪಿನಾಸರೆಯಲಿ.

ಕಣ್ಣೆವೆಗಳೆತ್ತುತ್ತಿರೆ ನವಿಲುಗರಿ ಛಾಯೆಯೊ
ಮೇಣದರ ಮಾಯೆಯೋ, ಲಾಸ್ಯವೇನೋ;
ತಂಗೊಳದ ತಡಿಯಿಂದ ತೂರಿಬಹ ತಂಬೆಲರೊ
ಎದೆಗಲಂಪಿನ ಪೆಂಪ ಪೂಸುತಿಹುದು.

ಲಾಲಿತ್ಯ ಲತೆಯಾಗಿ ತುಟಿಗಳಲಿ ಪಲ್ಲವಿಸಿ,
ಗಲ್ಲದಲಿ ಹೂವಾದ ರೂಹಾಗಿದೆ;
ಇಲ್ಲದಿರೆ ಲಾವಣ್ಯದಗ್ಗಳಿಕೆಯೆರಕದಲಿ
ಚೆಲುವಿಕೆಯ ಚಿರುಸುಧಾಮೂರ್ತಿಯಾದೆ.

ಬಿಡುಗಣ್ಣ ಕಡೆಯಂಚಿನಂಚಿನಾ ಕಡೆಯಲ್ಲಿ
ಏನಿಹುದು! ಏನಿಹುದು ಬಲ್ಲರಾರು?
ಬಾಳ ತೊಳೆ ತೊಳೆದು ಬೆಳಬೆಳಗಿಸುವ ಕಾಂತಿಯೋ
ಧೃತಿಗೆಡದ ದೀಧಿತಿಯೊ, ಪಡೆದರಾರು?

ಕೋಗಿಲೆ

೧

ಈಗ ತಾನೆ
ಬಂದಿತೇನೆ
ಮಧುರ ಕಂಠ ಕೋಗಿಲೆ?
ಜಗದ ಬಿನದ
ನಿನ್ನ ಮುದದ
ಗಾನವಾಯ್ತೆ ಒಮ್ಮೆಲೆ?

೨

ಕೆಂಪು ತಳಿರು
ಕಂಪಿನಲರು
ಸೂಸುತಿಹುದು ಮಾಮರಾ;
ಅಲ್ಲಿ ಕುಳಿತು
ಎಲ್ಲ ಮರೆತು
ಉಲಿಯುತಿರುವೆ ಸುಮಧುರಾ.

೩

ಗಾನ ಕೇಳಿ
ಮೌನತಾಳಿ
ಮೂಕವಾಯ್ತು ಭಾವನಾ;
ಮನುಜಲೋಕ
ದಿವಿಜ ನಾಕ -
ಗೈದ ಕುಹೂ ಕೂಜನಾ.

೪

ಎದೆಯು ಮಿಡಿದು
ತಾಳ ಹಿಡಿದು
ಕುಣಿಯುತಿಹುದು ಈ ಚಣಾ;
ರಸದ ಕಡಲು
ಹಿಗ್ಗಿನೊಡಲು
ತರತರಂಗ ಬಾಜನಾ.

೫

ರಸದ ಚಿಲುಮೆ
ಹರಿಸಿ ಒಲುಮೆ
ಸುಧೆಯ ನೀಡು ಕೋಗಿಲೆ;
ಮೌನ ಧ್ಯಾನ
ನಿನಗೆ ಊನ
ಕುಕಿಲು ಜಾಣ ಕೋಗಿಲೆ.

ಚಂದಿರ

ನೀಲ ನಿರ್ಮಲದಾಗಸದಿ ನಿಶ್ಚಿಂತನಾಗಿಹ ಚಂದಿರ
ಬಾನು ತೊಳಗಿದೆ, ಬುವಿಯು ಬೆಳಗಿದೆ,
ಶುದ್ಧ ಪಳುಕಿನ ಮಂದಿರ.

ನಿನ್ನ ನಗೆ ತನಿವೆಳಕ ತುಳುಕಿಸಿ
ಸೂರೆಯಾಗಿದೆ ಸುಂದರ,
ನಿನ್ನ ದಯೆ ಸುಧೆಯಾಗಿ ಸುರಿದಿದೆ
ಬೆಳ್ಳಿಗಿರಣದ ಹಂದರ.

ಚಿಕ್ಕೆ ಚಕಚಕ ಜೊನ್ನ ಪೂರದಿ
ತೇಲಿ ಮುಳುಗಿವೆ ಮೋಹನ,
ಜಗದ ಜಡ ಬಡ ಜೀವ ಗೇಹದಿ
ಶಾಂತಿಯಮೃತದ ಸೇಚನ.

ಬಾನ ಮೂಲೆಯ ಮೋಡಪಡೆ
ಮುದಗೊಂಡು ಬರುತಿದೆ ತೇಲುತ,
ಮದುಮಗನ ಸ್ವಾಗತಿಸೆ ನಿಬ್ಬಣ
ಹೊರಟ ಸಂಭ್ರಮ ಹೋಲುತ.

ಶಾಂತಿ ಬೆಳುದಿಂಗಳಿನ ಹಾಲಲಿ ಕರಗಿದಂತಿದೆ ತಿಂಗಳ
ಸುಯ್ಯೆಲರು ಹಾಯಾಗಿ ತೀಡಿದೆ
ಹದುಳವೆನೆ ಶುಭಮಂಗಳ.

ದೂರದಿಂದಲಿ ಕೇಳಿ ಬರುತಿದೆ
ಕೊಳಲು - ಕೊರಳಿನ ಗಾಯನ,

ಸುಗ್ಗಿಯಲಿ ಹಿರಿಹಿಗ್ಗಿ ರಿಂಗಣಗುಣಿದು
ಹಾಡಿದೆ ಜನಮನ.

ಇಂಥ ಸಮಯದಿ ಹಂಬಲದಿ
ಬಾಯ್ದೆರೆದ ಸಿಂಪಿದು ಭಾವನ;
ತರಗೆಲೆಯು ಗಿರುಕೆನಲು ಮೌನವೆ
ಬಿಕ್ಕಿದೊಲು ಬರಿ ಕಲ್ಪನ.

ಶ್ವೇತ ಪುತ್ರಿ

ಗಾಳಿಯ ಬೆರಳಿಗೆ ಬೆಳ್ಳಿಯ ಉಂಗುರ
ತೊಡಿಸುತ ಬರುತಿಹ, ಒಯ್ಯಾರಿ,
ಹೊಗೆಯ ಸುರುಳಿಗಳ ಅರಳಿನ ಮಾಲೆಯ
ಕೊರಳಿಗೆ ಸೂಡುವ ಸುಕುಮಾರಿ.

ಬಿಳಿಯ ಪತ್ತಲನ ತೆಳ್ಳನೆಯುಡುಗೊರೆ
ಕೆಂಗಿಡಿ ಕೆಂಬರಳಿನ ನತ್ತು;
ನಿರಾಭರಣ ಸುಂದರಿ, ಸುವಿಲಾಸಿನಿ
ಕಲಿಸಿದರಾರೀ ಹೊಸಗತ್ತು?

ಸುಳಿಗಾಳಿಗೆ ಬಲು ಬಳುಕುತ ನಟಿಸುವ
ಒಪ್ಪಿಡಿ ನಡುವಿನ ಹೊಗೆ - ರಾಣಿ,
ಒಂದೇ ಸೆಳೆತಕೆ ತುಟಿಗಳ ಮುದ್ರಿಕೆ
ನಿನ್ನಯ ಹೆಸರೇ 'ಜೇನು ಹನಿ'.

ಮೊದಮೊದಲಿಗೆ ಹಿರಿಕಿರಿಯರಿಗಂಜುತ
ಕಟ್ಟೇಕಾಂತದಿ ನೀನೊಲಿದೆ;
ಕಿತ್ತಿಳೆ ತೊಳೆ - ತುಟಿ ಮಧುರಿಮೆ ಹೀರಲು
ಮುತ್ತಿನ ಸತ್ತಿಗೆ ನೀನಾದೆ.

ಎಂದಾದರು ನೀನಿರದಿರೆ, ಬರದಿರೆ
ವಿರಹದಿ ಕೊರಗುವೆನೇಕಾಕಿ;
ಜುರಿಯೊಂದೆಳೆತಕೆ ಯೋಚನೆ ಮಾಲಿಕೆ
ಭಾವೋದ್ರೇಕವು ಧೂಮಾಕ್ಷಿ.

ಚಿತ್ರ ವಿಚಿತ್ರದ ಹೊಗೆ ಗೆರೆ ಮೂಡಿಸಿ
ಸೂತ್ರದ ಗೊಂಬೆಯನಾಡಿಸುವಿ,
ಬಯಲೊಳು ಧೂಮಸ್ತೂಪವ ನಿಲ್ಲಿಸಿ
ಬಾನ್ನೆಲವನ್ನಾಲಿಂಗಿಸುವಿ!

ಧೂಮಪಾನದೀ ಧೂಪಾರತಿಯೊಳೆ
ಜ್ಞಾನೋಪಾಸನೆಗೆಯ್ಯಿಸುವಿ,
ಧ್ಯಾನದಿ, ಮನನದಿ ವೈನತೇಯನೊಲು
ಅಮೃತಾಚಲವನ್ನೈದಿಸುವಿ!

ಗುರಿನಿರಿಯಿಲ್ಲದ ಗರಿಗರಿ ಮೋಡದ
ಸರಿದೊರೆಯಾಗಲು ಹೆಣಗುತಿಹೆ,
ಸುಂಟರಗಾಳಿಯ ಬಂಟನ ದಾಳಿಗೆ
ಕಂಟಣೆಸುತ ಕರಕರಗುತಿಹೆ,

ಮೋದದಿ ಸೇದಲು ಸೊದೆಯನು ಕುಡಿಸುವೆ
ಎದೆಯುರಿ ಸಹಿಸುತ ಕಲ್ಯಾಣಿ,
ಬಿಳಿಹೊಗೆ ಬೆಳ್ಗೊಡೆ ಚಾಮರದಡಿಯಲಿ
ಹಾಡಿ ಹರಸುವಳು ಗೀರ್ವಾಣಿ,

ಶಿವ ಶಿವ ಶಂಭೋ, ಚಿಲುಮೆಯ ತುಂಬೊ
ನಾನೆ ಸ್ವಯಂಭೂ, ಇನ್ನಿಲ್ಲ;
ಬಾರಿಸು ಡಮರುಗ, ಕುಣಿಯಲಿ ಭೃಂಗಿಯು
ಕೈಲಾಸದ ಸುಖ ಬೇರಿಲ್ಲ.

ಮಾತು

ಮುಂಜಾವದಲಿ ಹಸಿರು ಹುಲ್ಲ ಮಕಮಲ್ಲಿನಲಿ
ಪಾರಿಜಾತವು ಹೂವ ಸುರಿಸಿದಂತೆ,
ಮುಟ್ಟಿದರೆ ಮಾಸುತಿಹ ಮಂಜುಹನಿ ಮುತ್ತಿನಲಿ
ಸೃಷ್ಟಿ ಸಂಪೂರ್ಣತೆಯ ಬಿಂಬಿಪಂತೆ;

ಮೆಲ್ಲೆದೆಯ ಸವಿಯೊಲುಮೆ ಕರಗಿ ಕಂಬನಿಯಾಗಿ
ಹೆಣ್ಣ ಕಣ್ಣಂಚಿನಲಿ ತುಳುಕುವಂತೆ,
ಸುಳಿಗಾಳಿಯೊಂದಿನಿತು ಸೂಸಿ ಬಂದರು ಸಾಕು;
ಮರವನಪ್ಪಿದ ಬಳ್ಳಿ ಬಳುಕುವಂತೆ;

ನಾವು ಆಡುವ ಮಾತು ಹೀಗಿರಲಿ ಗೆಳೆಯ,
ಮೃದುವಚನ ಮೂಲೋಕ ಗೆಲ್ಲುವದು ತಿಳಿಯ,
ಮೌನ ಮೊಗ್ಗೆಯನೊಡೆದು ಮಾತರಳಿ ಬರಲಿ
ಮೂರು ಗಳಿಗೆಯ ಬಾಳು ಮಗಮಗಿಸುತಿರಲಿ.

ಬರುವದೆಲ್ಲ ಬರಲಿ ಬಿಡು

ಬರುವದೆಲ್ಲ ಬರಲಿ ಬಿಡು-
ಏಕೆ ಅದರ ಚಿಂತೆ?
ದುಃಖ -ಸುಖವು, ನಗೆಯು - ಹೊಗೆಯು
ಎಲ್ಲ ಅಂತೆ ಅಂತೆ.

ನಾವು ಗೈದ ಒಳಿತು, ಕೆಡಕು
ಜೀವ ಪಡೆವ ಭೋಗ;
ನಮ್ಮ ನುಡಿಯ ನಡೆಯ ಒಡಲ
ಕಡೆದ ಬೆಣ್ಣೆ ಯೋಗ.

ಕಣ್ಣು ಕಟ್ಟಿ ಬೆನ್ನು ತಟ್ಟಿ
ಓಡಿಸುವನು ಕಾಲ,
ಇವರ ಬಿಟ್ಟು ಇವರು ಯಾರು?-
ಎಂಥ ಮೋಹ ಜಾಲ!

ಮಿಡುಕನುಳಿದು ಹುಡುಕಬೇಕು,
ಅದುವೆ ಬಾಳ ಮೂಲ;
ಪಡೆಯದಿರಲು ಕಣ್ಣನೀರ
ಕರೆವುದಲ್ಲ ಶೀಲ.

ಬಟ್ಟಬಯಲ ತುತ್ತತುದಿಗೆ
ತಿರುಗುತಿಹವು ಗೋಲ,-
ಕೊಟ್ಟು ತೀರಲಿಲ್ಲ ಜನುಮ
ದೇವನಿತ್ತ ಸಾಲ.

ಏಸೊ ಕಡಲ ಈಸಿ ಬಂದು
ಬೀಸುತಿಹುದು ಗಾಳಿ;
ಗಾಸಿಗೊಂಡ ಭೂಮಿ ತಾಯಿ
ನರಳುತಿಹಳೆ ಹೇಳಿ.

ಮುಗಿಲ ಜೇನ ನರಸುತಿರುವ
ತುಂಬಿ ಭಾವದುಂಬಿ,-
ಹುಟ್ಟು ಹರಿಯೆ ಮುಂದುಗೆಟ್ಟ
ಓಟ ಎತ್ತೊ ಎಂಬಿ.

ಶಿಖರಕೊಂದು ಹೆಜ್ಜೆಯಿಟ್ಟು
ಗಾಳಿದೇರನೇರಿ,
ಬಾಳ ಕನಸು ಕರೆಯುತಿಹುದು
ಯಕ್ಷ ಲೋಕ ಸೇರಿ.

ಏನು ಮಾಟ! ಏನು ಮೋಡಿ!
ಚಣದ ನೋಟ, ಬೇಟ;
ಹೀಗೆ ಸಾಗುತಿಹುದು ನಮ್ಮ
ನೆಳಲು - ಬೆಳಕಿನಾಟ.

ಒಂದು ಮುಂಜಾವು

ಒಂದು ಮುಂಜಾವಿನಲಿ ತುಂತುರಿನ ಸೋನೆ ಮಳೆ
ಸೋ' ಎಂದು ಶ್ರುತಿ ಹಿಡಿದು ಸುರಿಯುತ್ತಿತ್ತು;
ಅದಕೆ ಹಿಮ್ಮೇಳವೆನೆ ಸೋಕಿ ಬಹ ಸುಳಿಗಾಳಿ
ತೆಂಗು ಗರಿಗಳ ನಡುವೆ ನುಸುಳುತಿತ್ತು.

ಇಳೆವೆಣ್ಣು ಮೈದೊಳೆದು, ಮಕರಂದದರಿಷಿಣದಿ
ಹೂ ಮುಡಿದು ಮದುಮಗಳ ಹೋಲುತ್ತಿತ್ತು;
ಮೂಡಣದಿ ನೇಸರನ ನಗೆಮೊಗದ ಶ್ರೀಕಾಂತಿ
ಬಿಳಿಯ ಮೋಡದ ಹಿಂದೆ ಹೊಳೆಯುತ್ತಿತ್ತು.

ಹುಲ್ಲೆಸಳು, ಹೂಪಕಳೆ, ಮುತ್ತು-ಹನಿಗಳ ಮಿಂಚು
ಸೊಡರಿನಲಿ ಆರತಿಯ ಬೆಳಗುತಿತ್ತು:
ಕೊರಲುಕ್ಕಿ ಹಾಡುತಿಹ ಚಿಕ್ಕಪಕ್ಕಿಯ ಬಳಗ
'ಶುಭಮಸ್ತು' 'ಶುಭಮಸ್ತು' ಎನ್ನುತ್ತಿತ್ತು.

ತಳಿರತೋರಣದಲ್ಲಿ, ಬಳ್ಳಿಮಾಡಗಳಲ್ಲಿ
ದುಂಬಿಗಳ ಓಂಕಾರ ಹೊಮ್ಮುತ್ತಿತ್ತು;
ಹಚ್ಚಹಸುರಿನ ಪಚ್ಚೆ ನೆಲಗಟ್ಟಿನಂಗಳದಿ
ಚಿಟ್ಟೆ ರಿಂಗಣಗುಣಿತ ಹಾಕುತ್ತಿತ್ತು.

ಉಷೆಯ ನುಣ್ಗದಪಿನಲಿ ಹರ್ಷಬಾಷ್ಪಗಳಂತೆ
ಮರದ ಹನಿ ತಟಪಟನೆ ಉದುರುತ್ತಿತ್ತು;
ಸೃಷ್ಟಿ ಲೀಲೆಯೊಳಿಂತು ತಲ್ಲೀನವಾದ ಮನ
ಮುಂಬಾಳ ಸವಿಗನಸ ನೆನೆಯುತಿತ್ತು.

ಬಂತು ಭಾರತ ಹುಣ್ಣಿಮೆ

ಬಂತು ಭಾರತ ಹುಣ್ಣಿವೆ!
ತೆರೆದು ಲೋಕದ ಕಣ್ಣಿವೆ.

ಕನಸು ಮನಸೂ ಹೊಂದಿವೆ
ಜೇನು ಬಟ್ಟಲ ತಂದಿವೆ;
ಇಂಥ ಸಮಯದಿ ಬಂಧವೆ?
ಏನು ಗೈದರು ಚಂದವೆ.

ಬಾನಿನುದ್ದಕು ಭೂಮಿಯಗಲಕು
ಎಲ್ಲಿಯೂ ಸ್ವಚ್ಛಂದವೆ.
ಬಂತು....!

ಗಾಳಿ ತಣ್ಣನೆ ತೀಡಿದೆ
ಮರಕೆ ಕಿವಿಮಾತಾಡಿದೆ.
ತುಂಡು ಮೋಡವು ತೇಲಿದೆ
ದುಂಡುಮಲ್ಲಿಗೆ ಹೋಲಿದೆ;
ಹಿಂಡನಗಲಿದ ಕರುವಿನಂದದಿ
ಬಾನ ಬಟ್ಟೆಯೊಳೋಡಿದೆ
ಬಂತು.... !

ಗೋದಿ ಹೊಲವೂ ಮಾಗಿದೆ
ಕಣದಿ ಹಂತಿಯು ಸಾಗಿದೆ;
ಹತ್ತಿ ತೊಳೆ ತೊಳೆ ತೊಳಗಿದೆ
ರೈತನೆದೆ ಮಾರ್ಪೊಳೆದಿದೆ.
ಕುಸುಬೆ ಹೂವಿನ ಕುಸುರಿನೊಂದಿಗೆ
ಜೀವನವೆ ಹಾಡಾಗಿದೆ

ಬಂತು...!

ನಿರ್ಭಯತೆ, ನಿರಪೇಕ್ಷತೆ
ಶುಭ್ರ ಗುಣ ಸಂಪನ್ನತೆ
ಬಾಳ ಬಾಳಗಿಪ ನವ್ಯತೆ
ನಿರ್ಮಲತೆ ಸವಿ ನಮ್ರತೆ -
ಅಳವಡಿಸುತಿವನೆಲ್ಲ ಕರಗಿಸಿ
ಇಂದಿನೀ ಬೆಳಕಾಯಿತೆ?

ಬಂತು....!

ಜೀವ ಹಂಸವು ನಲಿದಿದೆ
ಶಾಂತಿ ಸಾಗರಕಿಳಿದಿದೆ;
ನೋವು, ಚಿಂತೆಯು ತೊಲಗಿದೆ;
ಇಂದ್ರಲೋಕವು ಮಲಗಿದೆ;
ಚಂದ್ರ ಸಾಕಿದ ಚಿಗುರೆ ಭೂಮಿಗೆ
ಜಿಗಿವ ಹಂಬಲದಲ್ಲಿದೆ!

ಬಂತು...!

ಜಗದ ಪಾತ್ರೆಯು ತುಂಬಿದೆ
ಎಲ್ಲರಾಸೆಗು ಇಂಬಿದೆ;
ಜೈತ್ರ ಯಾತ್ರೆಗೆ ಕರೆದಿದೆ
ಸಕಲ ಸಿದ್ಧತೆಯಾಗಿದೆ
ಆವುದೋ ದಿವ್ಯಾನುಭಾವಕೆ
ತಾ 'ಉಧೋ' ಎಂದೆದ್ದಿದೆ!

ಬಂತು ಭಾರತ ಹುಣ್ಣಿವೆ
ತೆರೆದು ಲೋಕದ ಕಣ್ಣಿವೆ.

ಸೃಷ್ಟಿ ನೋಂತು ನಿಂತಿದೆ

೧

ಗಿಡದ ರೆಂಬೆ ಕೊಂಬೆಗಳಲಿ ಚಿಗುರು ಕಣ್ಣು ತೆರೆದಿದೆ
ಎಲ್ಲಿ ನೋಡಿದಲ್ಲಿ ಚೆಲುವು ಗೆಲ್ಲುಗಂಬ ನಿಲಿಸಿದೆ
ಹೊಸತು ಆಸೆ ಮೂಡಿದೆ
ಹರುಷ ಲಾಸ್ಯವಾಡಿದೆ
ಓ! ವಸಂತ ನಿನಗನಂತ ಆಲಿಂಗನ ಸಂದಿದೆ
ಸೃಷ್ಟಿ ನೋಂತು ನಿಂದಿದೆ.

೨

ಎಂದೊ ಆಗಲಿ ಹೋದ ನಿನಗೆ ನಮ್ಮ ನೆನಪು ಬಾರದೆ?
ಮಾಗಿ ಕೊರೆದ ಗಾಯವಿನ್ನು ಇಹುದು ಮನದಿ ಮಾಯದೆ
ಜೀವಕುಲವು ತಪಿಸಿದೆ
ನೂರು ಬಾರಿ ಶಪಿಸಿದೆ
ಪಾದರಸದ ತೆರದಿ ಜಾರಿ ಕಂಡ ಕಡೆಗೆ ಹರಿದಿದೆ
ತನ್ನತನವ ಮರೆತಿದೆ.

೩

ತಳಿರ ತಳ್ಕೆಯಲ್ಲಿ ಮುದ್ದು ಕೋಗಿಲೆಯದೊ ಕುಳಿತಿದೆ
ಅದರ ಉದರದೊಂದು ಉಸಿರು ಹಾಸಿ ಬೀಸಿ ಬರುತಿದೆ
ಓಹೊ! ಎಲ್ಲೊ ಕಂಡ ಹಾಗಿದೆ
ಆಹಾ! ಎಂದೊ ಕೇಳಿದಂತಿದೆ
ಇಂದು ಜಾಡ್ಯ ಹರಿದು ಇಳೆಗೆ ರೋಮಾಂಚನ ತಂದಿದೆ
ಸಮರ ತೂರ್ಯದಂತಿದೆ.

೪

ಏನು ಅಂದ ಬಿಸವಂದವೊ ನಿನ್ನ ಮಧುರ ಮೈತ್ರಿಯು!
ನೃತ್ಯ, ಹಾಡು, ಸೊಗದ ಕೋಡು - ಧನ್ಯಳೀ ಧರಿತ್ರಿಯು.
ಹೇಮಂತನ ತ್ಯಾಗವೂ
ಈ ವಸಂತ ಭೋಗವೂ
ಬದುಕಿಗೆಂದೆ ಬಿಜಯಗೈಯೆ ಪ್ರೀತಿ ಸಮಾಯೋಗವು-
ಹಾಗೂ ಹೀಗು ಹೇಗೆಯು

ಬನದ ಬಯಕೆ ಮಾಗಿದೆ
ಚೈತ್ರೋದಯವಾಗಿದೆ
ಬಾ ವಸಂತ ನಿನಗನಂತ ಆಲಿಂಗನ ಸಂದಿದೆ
ಸೃಷ್ಟಿ ನೋಂತು ನಿಂತಿದೆ.

ಶ್ರಾವಣದ ಲಾವಣ್ಯ

೧

ಬಾನ ಸಾಣೆಗೆ ಹಿಟ್ಟು ಸಾಣೆಸಿ -
ದಂತೆ ಜಿನುಗಿದೆ ಸೋನೆಯು;
ಬಿಳಿಯ ತೆಳು ಜವನಿಕೆಯನೆಳೆದಿಹ
ಇಳೆಯು ಸುಂದರ ಮೇಣೆಯು.
ಹುಲ್ಲು ಹಾಸಿದೆ, ಹೂವು ಸೂಸಿದೆ
ಗಾಳಿ ಮೂಸಿದೆ ಕಂಪನು,
ಶ್ರಾವಣದ ಲಾವಣ್ಯ ಕುಣಿದಿದೆ
ಮಳೆಯು ಹಣಿಸಿದೆ ತಂಪನು.

೨

ಹಸಿರು ಅಪರಂಪಾರ ಹಬ್ಬಿದೆ
ನೆಲವನೆಲ್ಲೆಡೆ ತಬ್ಬಿದೆ;
ಎತ್ತ ಹೊರಳಿದರತ್ತ ಮೆತ್ತಗೆ
ಚಿತ್ತದಲಿ ಅಚ್ಚೊತ್ತಿದೆ.
ತಿಳಿಹಸಿರು, ಗಿಳಿಹಸಿರು ಗದ್ದೆಗ -
ಳಲ್ಲಿ ಓರಣವಾಗಿದೆ,
ಕಡುಹಸಿರು ಕಾಡಿನಲಿ ತೋರಣ-
ವಾಗಿ ಹೊರೆ ಹೊರೆ ಬಾಗಿದೆ.

೩

ಹೂವು ಹೂವಿಗೆ ಕೈಯ ಕುಲುಕಿಸಿ
ನೊಸಲು ನೊಸಲಿಗೆ ಸೋಕಿಸಿ
ನೂರು ಪಾತರಗಿತ್ತಿ ಕುಣಿದಿವೆ
ಮೈಗೆ ಮೈಯನು ಪುಲಕಿಸಿ!

ಹೂಬಿಸಿಲು ಸುಸಿಲಾಟವಾಡಿದೆ
ಕೆನ್ನೆ ಕೆನ್ನೆಗೆ ತಾಕಿಸಿ
ಮೋಡ ಬಂದಿವೆ, ನೋಡ ಬಂದಿವೆ
ಮುತ್ತು ಹನಿಗಳ ಚಿಮುಕಿಸಿ.

೪

ಗಗನ ಪಕ್ಷಿಯು ಹಗಲಿನಕ್ಷಿಯ
ಮುಚ್ಚಿ ಕೂತಿದೆ ಬೆಚ್ಚಗೆ;
ಬೆಳಕು, ಗಾಳಿಯು, ಕನಸು ಮನಸೂ
ಎಲ್ಲವೂ ಹಸಿ ಹಚ್ಚಗೆ;
ಏನು ಹೇಳುವಿ ಹೇಳು ಕೆಳದೀ
ಇಂಥ ಹಸುರಿನ ಹುಚ್ಚಿಗೆ-
ನಂದನದ ವನವೆಂದೆಯಾ? - ಬಿಡು
ಗುಂಜಿ ತೂಕವು ಹೆಚ್ಚಿಗೆ.

ಮಧುಚಂದ್ರ

ಬಾ ಮಲ್ಲಿಗೆ
ಬಾ ಮೆಲ್ಲಗೆ
ನನ್ನೆದೆ ಮೆಲ್ವಾಸಿಗೆ;
ಇಳೆಗಿಳಿದಿದೆ
ಬೆಳುದಿಂಗಳು
ನಮ್ಮೊಲುಮೆಯ ಕರೆಗೆ.

ಚೆಲುವಾಗಿದೆ
ಬನವೆಲ್ಲವು,
ಗೆಲುವಾಗಿದೆ ಮನವು;
ಉಸಿರುಸಿರಿಗು
ತಂಪೆರಚಿದೆ
ನಿನ್ನೆದೆ ಪರಿಮಳವು.

ತಿಂಗಳ ತನಿ-
ವೆಳಕಲಿ ಮೈ -
ದೊಳೆದಿಹ ಮನದನ್ನೆ!
ಮಂಗಳವೀ
ಮನೆಯಂಗಳ
ಚೆಂಗಲವೆಯ ಚೆನ್ನೆ.

ಹಿತವಾಗಿದೆ
ಮೆಲ್ಲೆಲರುಲಿ
ಮಿತವಾಗಿದೆ ಮೌನ;
ಜೊತೆಗೂಡುತ
ಮಾತಾಡಿವೆ

ಅರೆನಿದ್ದೆಯೊಳೇನ?
ಲೋಕದ ಮೈ -
ನೋವಿಗೆ ಶ್ರೀ -
ಗಂಧದ ತನಿಲೇಪ;
ಆಕಾಶದ
ಗುಡಿಯಿಂದಲೆ
ಹೊರಸೂಸಿದೆ ಧೂಪ.

ಒಳಿತೆಲ್ಲವು
ಬೆಳಕಾಯಿತು,
ಬಾನ್ ಕರೆಯಿತು ಜೇನು;
ಆನಂದದ
ಕಡಲಾಳದಿ
ನಾವಾದೆವೆ ಮೀನು!

ಎವೆಯಿಕ್ಕದೆ
ಮಿನುಗುತ್ತಿವೆ
ಚಿಕ್ಕೆಯ ಹನಿ ದೀಪ;
ತಮ್ಮಷ್ಟಕೆ
ಜಾನಿಸುತಿವೆ
ಯಾವುದೊ ಸವಿನೆನಪ.

ಬಾ ಮಲ್ಲಿಗೆ
ಬಾ ಮೆಲ್ಲಗೆ
ನನ್ನೆದೆ ಮೆಲ್ವಾಸಿಗೆ -
ಇಳೆಗಿಳಿದಿದೆ
ಬೆಳುದಿಂಗಳು
ನಮ್ಮೊಲುಮೆಯ ಕರೆಗೆ.

ಈ ಮಲ್ಲಿಗೆ, ಈ ಗುಲಾಬಿ...!

ಈ ಮಲ್ಲಿಗೆ, ಈ ಗುಲಾಬಿ
ಚೆಲುವಿನೆರಡು ಕಣ್ಣ ಗೊಂಬಿ
ರಾಗದಾ ಪರಾಗ ತುಂಬಿ
ಬದುಕು ಬಣ್ಣ ಪಡೆಯಿತೆಂಬಿ
ನಸುಕು ತುಟಿಯ ತೆರೆದಿದೆ
ಜೀವರಸವನೆರೆದಿದೆ.

ಸ್ವರ್ಣಕಿರಣದರುಣ ಕಂದ
ಈ ಸುಗಂಧದಲ್ಲಿ ಮಿಂದ
ಗಾಳಿ ತೀಡೆ ಮಂದ ಮಂದ
ಆನಂದವೊ ಅನಿರ್ಬಂಧ
ಹೂವಿನಂತೆ ನುಣ್ಣಗೆ
ಕಂಡ ಕಣ್ಣು ತಣ್ಣಗೆ.

ಮಡಿಯನುಟ್ಟ ಮೆಲ್ಲಿತೆಲರು
ನೆಲದ ಗಲ್ಲ ಮುಟ್ಟೆ ಹಸುರು;
ನಿಮಿರಿನಿಂತ ಕಲಾಕುಸುರು-
ಇಳೆಗಿಳಿದರೆ ಬಾನಿನವರು
ಮಂಜು ಹನಿಯ ರೂಪದಿ?
ಅಪ್ಸರೆಯರು ಶಾಪದಿ!

ಕಣ್ಣ ಬೆಳಕ ಕಣ್ಣು ಕುಡಿದು
ಹೃದಯದಂತರಾಳಕಿಳಿದು
ಒಲವಿನಗ್ನಿ ಕುಂಡದಲ್ಲಿ
ಕರಗಿ ಮಿರುಗಿ ಹೊಮ್ಮಿತಿಲ್ಲಿ
ಉಷಃಕಾಲದಾರತಿ
ಚೈತನ್ಯದ ಪ್ರದ್ಯುತಿ.

ಈ ಪ್ರಶಾಂತ ಕಾಲದಲ್ಲಿ
ಮೌನ ವೀಣೆ ಮಿಡಿವುದಿಲ್ಲಿ,
ಈ ಮಹಾಂತ ಧಾಮದಲ್ಲಿ
ಸ್ವರ್ಗ ಭಿಕ್ಷೆ ಬೇಡಿತಿಲ್ಲಿ
ಇಲ್ಲಿ ಎಲ್ಲ ಪ್ರೀತವು
ಮಾತು ಕೂಡ ಗೀತವು.

ಬಂತು ತುಂಬಿ ಗಾನ ತುಳುಕಿ
ಬಂತು ಚಿಟ್ಟೆ, ಬಣ್ಣ ಸೋಕಿ,
ಒಂದು ಜೇನು ಹನಿಯ ಹುಡುಕಿ
ಒಂದು ಬಣ್ಣಕಾಗಿ ಬೆದಕಿ
ಭೃಂಗ ಗುಂಗು ಹಿಡಿಸಿತೋ
ಚಿಟ್ಟೆ ನೃತ್ಯವಾಡಿತು.

ಎಲೆ ಮಲ್ಲಿಗೆ, ಚೆಲು ಗುಲಾಬಿ
ಬಾರ ಚಿಟ್ಟೆ, ಬಾರ ತುಂಬಿ
ಮನದ ತುಂಗ ಶೃಂಗದಲ್ಲಿ
ಎನ್ನ ಹೃದಯ ರಂಗದಲ್ಲಿ
ದ್ವೈತವಿರದ ಕೂಟದಲ್ಲಿ
ಆತ್ಮನಮರ ತೋಟದಲ್ಲಿ
ಸದಾನಂದದೂಟೆಯಲ್ಲಿ
ಹಾಡಿ ನೃತ್ಯವಾಡಿರೇ
ಚಿರಂಜೀವಿಯಾಗಿರಿ.

ಜೀವ ಜೀವಾಳದಲಿ

೧

ಸಣ್ಣ ಮನೆಯನು ತುಂಬಿ
ನುಣ್ಣಗಿನ ದನಿಯಲ್ಲಿ
ಬಣ್ಣವೇರಿದ ಹೆಣ್ಣು ಹಾಡುತಿಹಳು -
ಕೈ ತುಂಬ ಹಸಿರು ಬಳೆ
ಹಣೆಗೆ ಕುಂಕುಮ ಚಂದ್ರ
ಜಡೆತುಂಬ ಮಲ್ಲಿಗೆಯ ಮುಡಿದಿರುವಳು.

೨

ಹೆಜ್ಜೆ ಹೆಜ್ಜೆಗಳಲ್ಲಿ
ನವಿಲನಾಡಿಸುತಿಹಳು
ಮಾತು ಮಾತಿಗೆ ಮುತ್ತು ಸುರಿಸುವವಳು,
ಚೆಂಗುಲಾಬಿಯ ಚೆಲುವೆ
ಚೆಂದುಟಿಯನರೆತೆರೆದು
ಉಸಿರುಸಿರಿಗೂ ಕಂಪ ಸೂಸುತಿಹಳು.

೩

ಹಾಲುಗಲ್ಲಿನ ಮೇಲೆ
ಬೆಳದಿಂಗಳಿಳಿದಂತೆ
ನಗೆಯ ಹೊಂಗೇದಗೆಯ ಮುಗುದೆಯಿವಳು
ಮುಂಜಾವು ಉಷೆಯಂತೆ
ಸಂಜೆ ಅಪ್ಸರೆಯಂತೆ
ಕಣ್ಣು ಕಣ್ಣಿಗೆ ದೀಪ ಮಿನುಗಿಸುವಳು.

೪

ನಲುಮೆದೋಳುಗಳಲ್ಲಿ
ಒಲುಮೆ ಮಾತುಗಳಾಡಿ
ಮುದ್ದಿಟ್ಟು ಮೂಲೋಕ ಮರೆಸುವವಳು.
ನಿದ್ದೆ ಬಂದವರಂತೆ
ಎದೆಯಲ್ಲಿ ಹುದುಗಿರಲು
ಕದ್ದು ನೋಡುವ ಆಶೆ ಹಚ್ಚಿದವಳು.

೫

ಅಳಲ ಕಂಬನಿಯೊರಸಿ
ಸೊಗದ ಹೂಮಳೆ ಸುರಿಸಿ
ಮೌನವಾಗಿಯೆ ಮನವ ಮಿಡಿಯುವವಳು,
ನೆನೆಸಿದೊಡನೆಯೆ ಕನಸಿ -
ನಲ್ಲಿ ಕೋರಯಿಸುವಳು
ಜೀವ ಜೀವಾಳದಲಿ ಕೂಡಿದವಳು.

ಜೊತೆ

ಬಾನಂಗಣದಲಿ ಕಂಕಣ ಕಟ್ಟಿದೆ
ಚಂದಿರ ರೋಹಿಣಿಯರ ಬಳಸಿ,
ಕಿರುಮೋಡವು ಹೆಡೆಯಾಡಿಸಿ ನಲಿದಿದೆ
ಗಾಳಿಯ ಪುಂಗಿಯನನುಸರಿಸಿ.

ಅಲ್ಲಿಂದಿಲ್ಲಿಗೆ ಸಾವಿರ ಮಲ್ಲಿಗೆ
ಚಿಕ್ಕೆಯ ಸೇತುವೆ ತೂಗಿಹುದು,
ಇರುಳಿನ ಹೆಜ್ಜೆಯ ಗೆಜ್ಜೆಯ ಮೆಲ್ಲುಲಿ
ಗಿರಿ, ವನ, ಕೊಳದಲಿ ಸುಳಿದಿಹುದು.

ಹಿತಮಿತವಾಗಿಹ ಮಾಯಾ ಬಂಧನ
ಸೃಷ್ಟಿ ರಹಸ್ಯದ ಛಾಯೆಯಿದು;
ಮಾತಿಗೆ ನಿಲುಕದ ರಸ ಸಂವೇದನ
ಅತ್ತಿಂದತ್ತವ ವಿವರಿಸದು.

ಈ ಬೆಳದಿಂಗಳ ಇಂಗಡಲಾಳದಿ
ಕಂಗಳ ಮೀನ್ಗಳ ತೆರೆಯೆ ಸಖಿ.
ಸೃಷ್ಟಿಯ ಸೌಂದರ್ಯೋಪಾಸನೆಯಲಿ
ನೀ ಬಳಿಗಿರೆ ನಾ ಪರಮ ಸುಖಿ.

ಮಗುವಿಗೆ

ನಮ್ಮ ಬಾಳ ಬಳ್ಳಿಗೊಗೆದ ಹೊಚ್ಚ ಹೊಸತು ಮಲ್ಲಿಗೆ!
ನೆಲ ಮುಗಿಲಿನ ಒಲವು ಗೆಲವು ಪಡೆದು ಬಂದಿತಿಲ್ಲಿಗೆ.
ಪರಿಮಳಿಸಿತು ತುಂಬಿ - ತೋಟ ನಿನ್ನ ಒಂದೆ ಸೊಲ್ಲಿಗೆ
(ಪುಟ್ಟ ಎಸಳುಗೈಗಳನ್ನು ಮುಟ್ಟಲೇನು ಮೆಲ್ಲಗೆ?)

ನಿದ್ದೆಯಲ್ಲು ನಗುವೆ ನೀನು ನಮ್ಮ ಬುದ್ಧಿಯಾಚೆಗೆ
ತೇಲುತಿರುವ ಮುದ್ದುಹಂಸ ಕೊಳದ ಸ್ವಪ್ನ ವೀಚಿಗೆ,
ತಾವರೆಯೆಲೆ ಹೊಚ್ಚಿದಂತೆ ಅಮ್ಮ ಹೊಲಿದ ಕುಂಚಿಗೆ
ನಮ್ಮ ಬಾಲ್ಯ-ಚಿತ್ರ-ಲೀಲೆಗಳ ವಿಶೇಷ ಸಂಚಿಕೆ.

ಗಾಳಿಗಡಲಿನಲ್ಲಿ ಹುಟ್ಟು ಕಡೆಯುತಿರುವ ಕೈಗಳು,
ಮಲಗಿದಲ್ಲೆ ಬೈಸಿಕಲ್ಲು ತುಳಿವ ಪುಟ್ಟ ಕಾಲ್ಗಳು.
ಇಷ್ಟು ಅಗಲ ಬಾಯಿ ತೆರೆದು ಆಕಳಿಸುವೆ ಏಗಳು
ಒಂದೆಸಮನೆ ನೋಡುತಿರುವೆ ನೋಯವೇನು ಕಂಗಳು?

ನೀನು ಅಳುವ ದನಿಯೆ ಮಧುರ ರಾಗವಾಗಿ ಸೆಳೆವುದು!
ಗೂಡಿನಲ್ಲಿ ಗುಬ್ಬಿಮರಿಯು ಚಿಂವ್ ಗುಡುವೊಲು ಸುಳಿವುದು;
ಇನ್ನು ಈಟು ಇರುವಾಗಲೆ ಹಟವ ತೆಗೆದು ನಮ್ಮನು
ಹೆದರಿಸುವೆಯ? ನೋಡು ಮತ್ತೆ ಬಂದುಬಿಡುವ ಗುಮ್ಮನು.

ತಾಯ ಒಲುಮೆ ತೂಗುತಿರಲು ನಿನ್ನ ಮುದದ ತೊಟ್ಟಿಲು
ಜೀಕವಾಡಿ ಏರುತಿರುವೆ ದಿನದಿನಗಳ ಮೆಟ್ಟಿಲು!
ಶುಭದ ಹರಕೆ ನವೋದಯಕೆ ನೂರು ದೀಪ ಹಚ್ಚಲು
ನಮ್ಮದೆಯಾನಂದಕೆಲ್ಲ ಕಂದ ನೀನೆ ಚೊಚ್ಚಲು.

ಗಗನದಿ ಸಾಗಿವೆ

ಗಗನದಿ ಸಾಗಿವೆ, ಬಾಗಿವೆ ಮೋಡ
ಹೋಗಿವೆ ನೀರನು ಸುರಿದು;
ಬರುವವು, ಬಂದೇ ಬರುವವು, ನೋಡ
ತುಂಬಿಸಿ, ತುಳುಕಿಸಿ ಹರಿದು.

ಇಳೆಗೂ ಬಾನಿಗು ಮಳೆ ಜೋಕಾಲಿ
ತೂಗಿದೆ, ತಂಗಿದೆ ಚೆಲುವು;
ಹಸುರೇ ಹಬ್ಬಿದೆ, ಹಸುರೇ ತಬ್ಬಿದೆ
ಹೆಸರಿಗು ಕಾಣದ ನೆಲವು.

ನಸುಕೋ, ಸಂಜೆಯೊ, ಮಿಸುಕದು ಬೆಳಕು,-
ತಾಯಿಯ ಮೊಲೆಗಿದೆ ಕೂಸು;
ಇರುಳೇ ಹೊರಳಿತು, ಹಗಲೇ ಮರಳಿತು,
ಚಿಗುರೆಲೆ ಹೂವಿಗೆ ಹಾಸು.

ಬೇಸಗೆ ಬಣಬಣ, ಚಳಿಗೋ ಒಣ ಒಣ,
ಶ್ರಾವಣ ತಣ್ಣಗೆ ನಡುವೆ;
ಎಲ್ಲಿದೆ ಬೆಂಕಿ? ಎಲ್ಲಿದೆ ಬೆಳಕು?
ಬೀಸುವ ಗಾಳಿಗೆ ಬಿಡುವೆ?

ನೀರೇ ಹರಿದಿದೆ, ನೀರೇ ಬೆರೆದಿದೆ
ನೀರೇ ಕರೆದಿದೆ ಮೊರೆದು;
ಯಾರೆ? ಎಂದರು, ನೀರೇ ಬರುವದು
ಬೆನ್ನಿನ ಹಿಂದೆಯೆ ಸರಿದು.

ಬೆಚ್ಚಗೆ ಒಳಗೆ, ಹಚ್ಚಗೆ ಹೊರಗೆ
ಹುಚ್ಚನು ಬಿಡಿಸಿದೆ ಮಳೆಯು;
ಎಚ್ಚರು ಎಚ್ಚರು ಎನ್ನುತ ಹರಿದಿದೆ
ತುಂಬಿದ ಬಾಳಿನ ಹೊಳೆಯು.

ಯುಗ ಯುಗದ ಹಾಡು

ಯುಗ ಯುಗಕೂ ಉರುಳು ತಿಹುದು
ಜಗದ ರಥದ ಗಾಲಿ,
ಹಗಲು - ಇರುಳು ಮರಳಿ ಮಸೆದು
ಸಾಹಸ ಮೈತಾಳಿ.

ಕಾಡು-ನಾಡು, ದೇಶ-ಕೋಶ,
ಭಾಷೆ -ಭಾವ ದಾಟಿ,
ಭೂಮಿ-ಬಾನು, ಬೆಂಕಿ - ನೀರು
ಗಾಳಿ, ರಾಟಿ - ಧಾಟಿ.

ನವ ಜನಾಂಗ ಮೂಡಿ ಮೊಳಗಿ
ಬದುಕು ತಿದ್ದಿ ತೀಡಿವೆ;
ಸೂರ್‍ಯ, ಚಂದ್ರ, ಚಿಕ್ಕೆ ಕೋಟಿ
ಕಣ್ಣರಳಿಸಿ ನೋಡಿವೆ.

ಊರು-ಕೇರಿ, ಭೂಮಿ ಸೀಮಿ
ಮೀರಿ ಬೆಳೆದ ಮಾನವ,
ನೂರು ತಾರೆಗಳಲಿ ಹುಡುಕು-
ತಿಹನು ವಿಶ್ವಗಾನವ.

ಸುತ್ತು ಮುತ್ತು ಭಯ, ಸಂಶಯ
ಕೊಳ್ಳಿದೆವ್ವ ಕುಣಿದಿವೆ;
ಮನಮನಗಳ ಮುಳ್ಳು ಬೇಲಿ
ಮಮತೆ ದೂರ ತಳ್ಳಿವೆ.

ಯುಗಪುರುಷರ ಜಗುಲಿಗಿರಿಸಿ
ಕೈಯ ತೊಳೆದುಕೊಂಡೆವು;
ಬಯಲಾಟದ ವೇಷ ಕುಣಿದು
ಬೆಳಗು ಬರಲು ದಣಿದೆವು.

ಪ್ರತಿಪದವೂ ಪ್ರಗತಿಗೆಂದು
ಹದವಿಲ್ಲದೆ ಮಿದಿದೆವು;
ಕುದಿಯಿಲ್ಲದೆ, ಎಸರಿಲ್ಲದೆ
ಕಸುಕಿಗೆ ಬಾಯ್ದೆರೆದೆವು.

ನಿನಗೆ ಬೇವು, ನನಗೆ ಬೆಲ್ಲ-
ನವಯುಗಾದಿ ಗಾದೆಯು ;
ಕೂಡಿ, ಕುಟ್ಟಿ ಸವಿಯಲಿಲ್ಲ
ಯುಗ ಯುಗಗಳ ಹಾಡಿದು.

ದೂರ ದೂರ ಬೇರು ಚಾಚಿ
ಟೊಂಗೆ, ಟಿಸಿಲು ಮನುಕುಲ,
ತಾಯಿ-ಬೇರು ಕಾಯಬೇಕು
ಹಣ್ಣಾಗಲಿ ಹಂಬಲ.

ಭೂಮಿ - ತೂಕ

ಮಾತು ಬೆಳ್ಳಿ, ಕತ್ತಲೆಯ ತಳ್ಳಿ ಸುತ್ತೆಲ್ಲ ಮಿನುಗುತಿರಲು
ಮೌನ, ಧ್ಯಾನ ಬಂಗಾರ ಕೃತಿಯು
ಮೂಡಲಕೆ ಮೂಡಿ ಬರಲು,
ಜಗದ ಅಂಗಳವ ದಾಟಿ, ಒಳಗೆ ಭಾರತದ ಗರ್ಭಗುಡಿಗೆ
ಸೂರ್ಯಕಿರಣ ಶಿವಲಿಂಗ ತಾಗೆ ಹೂವಾಗಿ ಎಲ್ಲರೆದೆಗೆ.

ಹೊರಗೆ ಬರಲಿ ಬಂಗಾರ ಬೆಳ್ಳಿ, ಅದಕಿಹುದು ಭೂಮಿ ತೂಕ
ತೆರೆಗೆ ಬರಲಿ ತಾದಾತ್ಮ್ಯಹೊಂದಿ
ನಟ-ನಾಟ್ಯ ಜೀವ ಪಾಕ;
ಕುದಿದು ದೇಶ ತಳಮಳಿಸುತಿರಲು ತಳಕಿಳಿಯೆ ಕ್ಷುದ್ರಕಸವು,
ತುಪ್ಪವಾಗಿ, ಮನಕೊಪ್ಪವಾಗಿ
ಗಮನಮಿಸಬಹುದು ಯಶವು.

ತೂಗಬೇಕು ಮನದೊಳಗೆ ತೂಕವುಳ್ಳವರ ಮಾತುಹಿಡಿದು,
ಬಾಗಬೇಕು ಬಿಲ್ಲಾಗಿ ದೂರ ಗುರಿಯೆಡೆಗೆ ಜೀವ ಮಿಡಿದು,
ಕಾಯಬೇಕು ಹುಳಿಯೊಗರು ಮಾಗಿ
ರಸತುಂಬಿ ತೂಗುವರೆಗು,
ಇಂದೊ -ನಾಳೆ ಬಂದೀತು ಗೆಳೆಯ
ಆ ಅಮೃತಗಳಿಗೆ ನಮಗು.

ದೂರ ಸಿಡಿದು ಕಿಡಿಯಂತೆ
ಬದುಕು -ಬಣಿವೆಯನು ಉರಿಸಬೇಡ,
ಭಾರತವೆ ಇಹುದು ಕಣ್ಮುಂದೆ,
ಹಿಂದೆ ಜಡೆಗಟ್ಟನಿಂತ ಮೋಡ,
ಯಾರು ಹೇಳಿಕೊಂಡೊಯ್ಯುದಿಲ್ಲ,
ಹೋರಾಟವೊಂದೆ ಕೊನೆಗೆ,
ತಾಯಿ-ನೆಲದ ಈ ಮಣ್ಣು ಗಂಧ
ಕುಂಕುಮವು ನಮ್ಮ ಹಣೆಗೆ.

ವಿಶ್ವಭಾರತಿಗೆ ಕನ್ನಡದಾರತಿ

ವಿಶ್ವವಿನೂತನ, ವಿದ್ಯಾಚೇತನ, ಸರ್ವಹೃದಯ ಸಂಸ್ಕಾರಿ
ಜಯಭಾರತಿ, ಕರುನಾಡ ಸರಸ್ವತಿ
ಗುಡಿಗೋಪುರ ಸುರಶಿಲ್ಪ ಕಲಾಕೃತಿ
ಕೃಷ್ಣೆ, ತುಂಗೆ, ಕಾವೇರಿ ಪವಿತ್ರಿತ ಕ್ಷೇತ್ರ ಮನೋಹಾರಿ.
ವಿಶ್ವವಿನೂತನ .... ||೧||

ಗಂಗ, ಕದಂಬಾ, ರಾಷ್ಟ್ರಕೂಟ ಬಲ
ಚಲುಕ್ಯ, ಹೊಯ್ಸಳ, ಬಲ್ಲಾಳ
ಹಕ್ಕ, ಬುಕ್ಕ, ಪುಲಕೇಶಿ, ವಿಕ್ರಮರ
ಚೆನ್ನಮ್ಮಾಜಿಯ ವೀರಶ್ರೀ
ವಿಶ್ವವಿನೂತನ .... ||೨||

ಆಚಾರ್ಯತ್ರಯ ಮತಸಂಸ್ಥಾಪನ
ಬಸವಾಲ್ಲಮ ಅನುಭಾವ ನಿಕೇತನ
ಶರಣ, ದಾಸ, ತೀರ್ಥಂಕರ ನಡೆ-ನುಡಿ ವಿಶ್ವತಮೋಹಾರಿ.
ವಿಶ್ವವಿನೂತನ .... ||೩||

ಪಂಪ, ರನ್ನ, ನೃಪತುಂಗ, ಹರೀಶ್ವರ
ರಾಘವಾಂಕ, ಸರ್ವಜ್ಞ, ಪುರಂದರ
ಕುವರವ್ಯಾಸ, ರತ್ನಾಕರ, ಜನಪದ ಕಾವ್ಯ ಸಮುದ್ರವಿಹಾರಿ.
ವಿಶ್ವವಿನೂತನ .... ||೪||

ಸಾಯಣ, ವಿದ್ಯಾರಣ್ಯ, ಭಾಸ್ಕರ
ಮಹಾದೇವಿ, ಮುಕ್ತಾಯಿ ಮಹಂತರ,

ಕಂತಿ - ಹಂಪ, ಸುಮನೋರಮೆ - ಮುದ್ದಣ
ಸರಸ ಹೃದಯ ಸಂಚಾರಿ.
ವಿಶ್ವವಿನೂತನ .... ||೫||

ತ್ಯಾಗ-ಭೋಗ-ಸಮಯೋಗದ ದೃಷ್ಟಿ
ಬೆಳುವೊಲ, ಮಲೆ, ಕರೆ, ಸುಂದರ ಸೃಷ್ಟಿ
ಜ್ಞಾನದ, ವಿಜ್ಞಾನದ, ಕಲೆಯೈಸಿರಿ,
ಸಾರೋದಯ ಧಾರಾನಗರಿ.
ವಿಶ್ವವಿನೂತನ .... ||೬||

ಅರಿವೇಗುರು, ನುಡಿ ಜ್ಯೋತಿರ್ಲಿಂಗ,
ದಯವೇ ಧರ್ಮದ ಮೂಲ ತರಂಗ
ವಿಶ್ವಭಾರತಿಗೆ ಕನ್ನಡದಾರತಿ,
ಮೊಳಗಲಿ ಮಂಗಲ ಜಯಭೇರಿ
ವಿಶ್ವವಿನೂತನ .... ||೭||

ನೀಲಾಂಬಿಕೆ

೧

ಸದುವಿನಯದ ತುಂಬಿದ ಕೊಡ
ತಂದಳು ನೀಲಾಂಬಿಕೆ,
ಕಲ್ಯಾಣದ ಅಂಗಳದಲಿ
ತಳಿ ಹೊಡೆದಳು ಛಂದಕೆ,
ಸಮಚಿತ್ತದ ರಂಗೋಲಿಯು
ಒಳಹೊರಗೂ ಧೂಪವು,
ಹಾದಾಡುವ ಹೊಸತಿಲಲ್ಲಿ
ಹೊಯ್ದಾಡದ ದೀಪವು.

೨

ಮಹಾಮನೆಯ ಮಹಾತಾಯಿ
ಮಾಸದ ಮಡಿ ಹಾಸಲು,
ದಾಸೋಹಕೆ ಮೀಸಲಾದ
ತೃಪ್ತಿಯ ನಗೆ ಸೂಸಲು,
ಎಲ್ಲೆಲ್ಲಿಯ ಗಣ ತಿಂಥಿಣಿ
ತಣಿದು ಹಾಡಿ ಹರಸಲು,
ಭಕ್ತಿಯ ಭಂಡಾರ ತುಂಬಿ
ಹರಡಿತು ಬೆಳುದಿಂಗಳು.

೩

ಅಯ್ಯನ ಕೈ ನೋವುದೆನಲು
ಆಭರಣವ ಕೊಟ್ಟಳು,
ಅನುಭಾವದ ಅಲಂಕಾರ
ಆಚರಣೆಯ ತೊಟ್ಟಳು.
ನೆರಳಾದಳು ಬಸವಣ್ಣನ

ಹರಳಾದಳು ಬೆರಳಿಗೆ,
ಅರಳಾದಳು ಲಿಂಗದಲ್ಲಿ
ಪರಿಮಳಿಸುತ ಪೂಜೆಗೆ.

೪

ಏನು ನೋವೋ ಹೇಳಲಿಲ್ಲ
ಕೇಳಲಿಲ್ಲ ಮಡದಿಗೆ,
ಹಾಗೆ ಹೊರಟು ಹೋದರಣ್ಣ
ಕಲ್ಯಾಣದ ಹುಡದಿಗೆ,
ಕೂಡಲದಲಿ ನೀರು ಹರಿದು
ತಿಳಿಗೊಂಡಿತು ಬನ್ನಿರಿ
ನೀಲಾಂಬಿಕೆ ನೆನಪಾದಳು
ಬೇಗನೆ ಕರೆತನ್ನಿರಿ.

೫

ಕರಸ್ಥಲದಿ ಬಸವರೂಪು
ಪರಿಣಾಮವ ಮೀರಿಸಿ,
ಬಸವಯ್ಯನು ಮಾಡಿದಾಟ
ಲಿಂಗದೆಡೆಗೆ ತೋರಿಸಿ
ಅಲ್ಲಿ, ಇಲ್ಲಿ ಉಭಯವಳಿದು
ಅಂಗೈಯಲಿ ಸಂಗಮ!
ಅಲ್ಲಿದ್ದರು, ಇಲ್ಲಿಲ್ಲವೆ?
ಜಗದ ಜೀವ ಜಂಗಮ!

೬

ನೀಲಾಂಬೆಯ ನಿಲವಿನಲ್ಲಿ
ಮಹಾಲಿಂಗ ಹೊಳೆಯಲು,
ಬಸವಣ್ಣನ ಭಕ್ತಿಕಲಶ
ಸಂಗಮನದಿ ತೊಳೆಯಲು

ಗಾಳಿಯಲ್ಲಿ ಗಾಳಿಯಾಗಿ
ಮಹಾ ಬೆಳಗು ಸಂದಿತು;
ಪ್ರಾಣ ಲಿಂಗದಲ್ಲಿ ಕರಗಿ
ನೀಲಾಂಬರ ಮಿಂಚಿತು.

ಅಕ್ಕಮಹಾದೇವಿಗೆ

ಶರಣು ಮಾದೇವಿಯೆ, ಕರುಣೆಯ ನಲ್ದಾಯಿ
ಅರುಣೋದಯವಾಯ್ತು ಜಗಕೆ,
ವಿಷಯದಾವರಣವು ಕೊಸರಿಕೊಂಡ್ಹೋಯಿತು
ಮಲ್ಲಿಕಾರ್ಜುನ ಲಿಂಗ ಪದಕೆ.

ಕಾಯದ ಜೀವದ ಭಾವದ ಲಜ್ಜೆಯ
ಒಜ್ಜೆಯ ಇಳುಹಿದೆ ತಾಯಿ,
ಕತ್ತಲೆ ಬೆಳಗಿಗೆ ಬತ್ತಲೆಯಾಯಿತು,
ಅತ್ತಲೆ ಹೋಯಿತು ಮಾಯಿ.

ನೆಚ್ಚುಗೆ, ಮೆಚ್ಚುಗೆ, ಸಲ್ಲುಗೆ, ಸೋಲುಗೆ
ನಿಚ್ಚಟ ಕಲ್ಲೊಳು ಬೀಸಿ
ಕೊರಗುವ, ಮರುಗುವ ಕಸ-ಕಡ್ಡಿ ತೂರಿದೆ
ಅರಿವು-ಸಾಣಿಗೆಯಲ್ಲಿ ಸೋಸಿ.

ಹಿಗ್ಗಿ ಹಾರೈಸದೆ. ಪೂಜೆ ಪೂರೈಸದೆ
ಹಾಡದೆ ಪಾಡದೆ ಎದೆಯು
ಸ್ಥೈರಿಸದಾಯಿತು, ಅಂತಃಕರಣದಿ
ಕಿಚ್ಚಿಲ್ಲದ ಬೇಗೆ ಕುದಿಯು.

ಮಾಮರ, ಕೋಗಿಲೆ, ತುಂಬಿ, ಬೆಳುದಿಂಗಳು,
ನವಿಲು, ಹಂಸೆಯು, ಗಿಳಿ ತವಕ;
ಅಕ್ಕನ ಹೃದಯದ ಚೊಕ್ಕ ಹಂಬಲ ತುಂಬಿ
ಗಿರಿ, ನದಿ, ಬನಕೆಲ್ಲ ಪುಲಕ.

ಆರೂ ಹೊಗಬಾರದ ಕಲ್ಯಾಣ ಹೊಕ್ಕಳು
ಮುಚ್ಚು ಮರೆಯೆಲ್ಲವ ತೊರೆದು,
ಅನುಮಾನ ಜಕ್ಕಿಸಿ, ಅಂತರ್ಯ ಉಕ್ಕಿಸಿ
ಅನುಭಾವದಾರತಿ ಹಿಡಿದು.

ತಿಕ್ಕುತ, ತೇಯುತ, ಮಿಕ್ಕುತ, ಮೀರುತ
ಚೊಕ್ಕ ಬಂಗಾರವೆ ನಡೆಗೆ;
ಅಕ್ಕನ ವಚನವೆ ಕುಂದಣವಿಕ್ಕಿತು
ಮಿಕ್ಕಿನ ಶರಣರ ನುಡಿಗೆ.

ಆದಿ-ಅನಾದಿಯ, ಕಾಮ ಸಂಗ್ರಾಮದ
ನಾಮ-ನೇಮಗಳೆಲ್ಲ ಹುರಿದು,
ಸ್ವಾನುಭಾವದ ಒಳಗೆ ತಾನುತಾನಾದಳು
ಅನುವನರಗಿಸಿ, ಘನವ ಬೆರೆದು.

ಬಸವಣ್ಣ ಅಲ್ಲಮರೆಲ್ಲರ ಮಲ್ಲಿಗೆ,
ಕದಳಿಯ ಬನ ಬಿಟ್ಟ ಗೊನೆಯೆ!
ಉರಿಯ ಕೊಳ್ಳುವ ಹಾಯ್ದು ಶ್ರೀ ಶಿಖರವೇರಿದೆ
ವಿರತಿ - ಸಂಕ್ರಾಂತಿಯ ತೆನೆಯೆ!

ಶರಣು ಮಾದೇವಿ, ಹೊಂಗಿರಣವ ಬದುಕಿನ
ಭರಣಿಗೆ ತುಂಬಿಸಿ ತೆರೆಯೆ-
ತೆರಣೀಯ ಹುಳುವಿನ ಸರಣಿಯ ಬಿಡಿಸವ್ವ
ಶತಮಾನಗಳ ಮಬ್ಬು ಹರಿಯೆ.

ಯಾರು ಕೇಳುತ್ತಾರೆ, ಹೇಳಿರಣ್ಣ

ಅಲ್ಲಿ ಮುಳುಗುತ್ತಾರೆ, ಇಲ್ಲಿ ಏಳುತ್ತಾರೆ
ಎದ್ದು ಮೆರೆಯುತ್ತಾರೆ, ಹದ್ದು ಮೀರುತ್ತಾರೆ
ಯಾರು ಕೇಳುತ್ತಾರೆ, ಹೇಳಿರಣ್ಣ.

ಕದ್ದು ಕೇಳುತ್ತಾರೆ, ಸುದ್ದಿ ಮಾಡುತ್ತಾರೆ
ಗುದ್ದಿ ನೋಡುತ್ತಾರೆ, ಒದ್ದು ಓಡುತ್ತಾರೆ
ಯಾರು ಕೇಳುತ್ತಾರೆ, ಹೇಳಿರಣ್ಣ

ಹೊರಗೆ ಮೆಚ್ಚುತ್ತಾರೆ, ಒಳಗೆ ಚುಚ್ಚುತ್ತಾರೆ
ಮರೆಗೆ ಕಚ್ಚುತ್ತಾರೆ, ತೆರೆಗೆ ಬಿಚ್ಚುತ್ತಾರೆ
ಯಾರು ಕೇಳುತ್ತಾರೆ, ಹೇಳಿರಣ್ಣ.

ತಲೆಯ ಕೆರೆಯುತ್ತಾರೆ, ಕಲೆಯ ಕೊರೆಯುತ್ತಾರೆ
ನೆಲವ ಮರೆಯುತ್ತಾರೆ, ಬೆಲೆಗೆ ಮೆರೆಯುತ್ತಾರೆ
ಯಾರು ಕೇಳುತ್ತಾರೆ, ಹೇಳಿರಣ್ಣ.

ಮೇಜು ಗುದ್ದುತ್ತಾರೆ, ಮೈಕು ಮುರಿಯುತ್ತಾರೆ
ಮಾಲೆ ಬೇಡುತ್ತಾರೆ, ಮೋಜು ಮಾಡುತ್ತಾರೆ
ಯಾರು ಕೇಳುತ್ತಾರೆ, ಹೇಳಿರಣ್ಣ.

ಫಂಡು ಎತ್ತುತ್ತಾರೆ, ಎತ್ತಿ ಹಾಕುತ್ತಾರೆ
ಬಂಡು ಹೂಡುತ್ತಾರೆ, ಬೆಂಡು ಸುಲಿಯುತ್ತಾರೆ
ಯಾರು ಕೇಳುತ್ತಾರೆ, ಹೇಳಿರಣ್ಣ.

ಕೈಯ ಮುಗಿಯುತ್ತಾರೆ, ಕಾಲು ಕೆದರುತ್ತಾರೆ
ಬಾಲ ಹಿಡಿಯುತ್ತಾರೆ, ಮೇಲೆ ಏರುತ್ತಾರೆ
ಯಾರು ಕೇಳುತ್ತಾರೆ, ಹೇಳಿರಣ್ಣ.

ಬಾಯಿ ಬಡಿಯುತ್ತಾರೆ, ಕಾಯಿ ಒಡೆಯುತ್ತಾರೆ,
ಮರ್ಜಿ ಹಿಡಿಯುತ್ತಾರೆ, ಕುರ್ಚಿ ಪಡೆಯುತ್ತಾರೆ,
ಯಾರು ಕೇಳುತ್ತಾರೆ, ಕೇಳಿರಣ್ಣ.

ರೈಲು ತಡೆಯುತ್ತಾರೆ, ದೀಪ ಒಡೆಯುತ್ತಾರೆ,
ಕಲ್ಲು ತೂರುತ್ತಾರೆ, ಸುಳ್ಳು ಹೇಳುತ್ತಾರೆ;
ಯಾರು ಕೇಳುತ್ತಾರೆ, ಹೇಳಿರಣ್ಣ.

ಹೊತ್ತು ಹೊರೆವವರಿಲ್ಲ, ಕಿತ್ತು ತಿಂಬುವರೆಲ್ಲ
ಬಿತ್ತಿ ಬೆಳೆದವರಿಗೂ ತುತ್ತು ಭರವಸೆಯಿಲ್ಲ
ಎತ್ತ ಹೊರಳಿದರದೇ ನೋಟವಣ್ಣ.

ಹೇಳುವವರೇ ಎಲ್ಲ, ಕೇಳುವವರೇ ಇಲ್ಲ
ಹೇಳಿ ಕೇಳೀ ಬಾಳ ಏಕತಾರಿಯ ಪದವ
ಯಾರು ಕೇಳುತ್ತಾರೆ, ಹೇಳಿರಣ್ಣ.

ಎದ್ದೀರಾ? ನೀವು ಎದ್ದೀರಾ!

ಎದ್ದೆವೆದ್ದೆವು ಶರಣು
ಎದ್ದೀರಾ? ನೀವು ಎದ್ದೀರಾ!
ದಿನವೂ ದಿಲ್ಲಿಗೆ ಹೋಗಿ
ಗುಲ್ಲು ಗದ್ದಲ ಹಾಕಿ
ಇಲ್ಲಿದ್ದವರ ಬಾಳೆ - ಬದುಕು ಚೆಲ್ಲಾಪಿಲ್ಲಿ
ಮಾಡೀರಾ! ಕದ್ದು ಓಡೀರಾ?

ಮೂವತ್ತು ವರುಷಾತು
ಮಾಡಿದ್ದೇ ಮಸಲತ್ತು
ಕೈಹಿಡಿದು ಕೇಳಾಕ ಯಾರಿಗೆ ಕುವ್ವತ್ತು?
ಆಯೋಗ, ಸುಯೋಗ
ಒಂದೊಂದೂ ಹೊರಬಿತ್ತು
ಮುಚ್ಚೀರಾ? ಕಣ್ಣು ತೆರೆದೀರಾ!

ತಿಂದದ್ದೆ ತಿಂದದ್ದು
ತಲೆಗೆ ಅಮಲೇರಿದ್ದು
ಕಾಡು ಪ್ರಾಣಿಗಳೆಲ್ಲ ಕಸರತ್ತು ಮಾಡಿದ್ದು
ಬುದ್ಧಿವಂತರ ಸದ್ದು
ಅಡಗೀಸಿ ಹಾಕಿದ್ದು
ಬಿಟ್ಟೀರಾ? ಬಾಯಿ ಕಟ್ಟೀರಾ!

ಕತ್ತಲು ಹಾಡೇ ಹಗಲು
ಇಡಿ ದೇಶದುದ್ಧ
'ಎಲ್ಲಾರು ಮಲಗಿರಲು ಇವನೊಬ್ಬನೆದ್ದ'
ಬಿಡುಗಡೆ ತರಲೆಂದೆ
ಜೀವ ಹಿಡಿದಿದ್ದ
ತಿಳಿದೀರಾ? ಮತ್ತೆ ಕಳೆದೀರಾ!

ಬಡವರ ಹೆಸರೀಲೆ
ತುಡುಗು ಮೇದವರೆಲ್ಲ
ಹಿಡಿಯಾಕ ಹೊಂಟಾರು ಗೆದ್ದ ಎತ್ತಿನ ಬಾಲ
ಸುತ್ತು ಕಾವಲು ಇರಲಿ
ಆಗ್ಯಾರ ಕಂಗಾಲ
ಬಿಟ್ಟೀರಾ! ನೆನಪು ಇಟ್ಟೀರಾ?

ನೆಟ್ಟsಗ ನಡದರ
ಅಡಗಾಲು ಹಾಕಿ
ಕೆಡವಾಕ ನಿಂತಾರ ಅಲ್ಲಲ್ಲೆ, ಜ್ವಾಕಿ
ಅವರೂನು ಅಂದಾರು
'ಭಾರತಮಾತಾಕೀ
ಹೋದೀರಾ! ಮೋಸ ಹೋದೀರಾ!

ಆದದ್ದು ಆಗ್ಹೋಯ್ತು
ಅಂದsರ ಹ್ಯಾಂಗ?
ಹುಗಿದಿದ್ದ ಇತಿಹಾಸ ಹೊರಬಂತು ಮ್ಯಾಗ
ಭಂಡರು ನಿಂತಾರ
ಸೆರಗು ಮರೆಯಾಗ
ಕಟ್ಟೀರಾ? ಹಿಡಿದು ಬಿಟ್ಟೀರಾ!

'ಬಿದ್ದೀಯಬೆ ಮುದುಕಿ'
ಪದವ ಹಾಡುದು ಬಾಕಿ
ಎಷ್ಟು ಇಟ್ಟರು ಕೂಡ ಬರವಲ್ದು ನಾಚಿಕಿ,
ಬಾಲಬಡಕರಿಗಿನ್ನೂ
ದೆವ್ವದ ಹೆದರಿಕಿ
ಬರತೀರಾ? ಅಲ್ಲೆ ಇರತೀರಾ?

ಎದ್ದೆವೆದ್ದೆವು ಶರಣು
ಎದ್ದೀರಾ, ನೀವು ಎದ್ದೀರಾ?

ನಿನ್ನ ಕರುಣೆಗೆ

ನಿನ್ನ ಕರುಣೆಗೆ ನಾನು ಕೇಂದ್ರವಾಗಿ
ನಿಂದಿರುವೆ ಮೌನದಲಿ ತಲೆಯ ಬಾಗಿ

ಮುಗಿಲಿಂದ, ಹಗಲಿಂದ, ಇರುಳಿಂದ ಬಂದು
ಮುಗಿಯದಾವುದೊ ಮಹಾದ್ಭುತವ ತಂದು,
ಬದುಕು ಪೊರೆ ಪೊರೆ ಬಿಚ್ಚಿ ಹದಗೊಳಿಸಲೆಂದು
ಒಳಗು ಹೊರಗೂ ತುಂಬಿ ತುಳುಕಿರುವೆ ಇಂದು.

ಅಂಜುವೆನು, ಅಳುಕುವೆನು ಅಷ್ಟಿಷ್ಟಕೆಲ್ಲ
ಮಂಜು ಮುಗಿಬೀಳುವುದು ಭೂಮಿ ಬಾನೆಲ್ಲ;
ಹಿಂಜುವವು ನೇಸರನ ನೂರಾರು ಕಿರಣ
ಜೇಡಬಲೆ ತುಂಬೆಲ್ಲ ಮುತ್ತಿನಾಭರಣ.

ಒಂದೊಂದೆ ಹೂವುಗಳ ಆಯುವದು ಹೇಗೆ?
ಆ ಬಣ್ಣ, ಆ ನವುರು ಅದಕದರ ಸೋಗೆ.
ಸೃಷ್ಟಿಯಲಿ, ದೃಷ್ಟಿಯಲಿ ನಡೆದಿಹುದು ಪೂಜೆ
ಕಷ್ಟ-ಸುಖ-ಸಂಭ್ರಮದ ಸಂತೋಷದಾಚೆ.

ನಾಗರ ಪಂಚಮಿ

ಮಳೀ ಸುರಿದು ಹೋತೋ ಅಣ್ಣ
ಬೆಳೀ ತುಂಬಿ ಬಂತೋ ||

ದಾಸವಾಳ, ನಂದಿಬಟ್ಲ
ಗುಲಾಬಾಕ್ಷಿ, ಮಲ್ಲಿಗಿ, ಜಾಜಿ
ಪಾರಿಜಾತ, ಸಂಪಿಗಿ, ಗೌರಿ
ದಾರಿ ತುಂಬ ಸುರದಾವಲ್ಲ ||೧||

ಭೂಮಿ ತಾಯಿ ಎತ್ತಿಕೊಂಡು
ಬೋಲ ಬಗರಿ ಆಡಿಸುತ್ತ
ಬಾಯಿ ತೆರೆದ ಹುತ್ತದೊಳಗೆ
ಜೀವದ್ಹಾಲು ಹೊಯ್ದಾಳಲ್ಲ ||೨||

ಹಸಿರು ಸೀರಿ, ಹೂವಿನ ಸೆರಗು
ತವರುಮನೆಯ ನೆನಸಿ ಬಂದು
ಒಕ್ಕಲಾಗಿ ಅಕ್ಕರತೀಲೆ
ಜೋಕಾಲಿ ಆಡ್ಯಾರಲ್ಲ ||೩||

ನೋವು-ನಲಿವು, ಹಿಂದು ಮುಂದು
ಪ್ರೀತಿಯೊಂದ ಜಪ್ಪಿಸಿಕೊಂಡು
ಹುರುಪಿನಿಂದ ಎಲ್ಲರ ಕೂಡ
ಜೀಕುವದೆ ಜೀವನವೆಂದು ||೪||

ಯುವಶಕ್ತಿ

ಯಾವ ಕಾಲಕೂ, ಯಾವ ದೇಶಕೂ
ಯುವಕ ಶಕ್ತಿ ಚಿಲುಮೆ;
ಇಳೆಗೆ ಇಳಿದು, ಆ ನಭಕೆ ಬೆಳೆದು, ಜಗ
ಕಾಸಿ ಬಡಿವ ಕುಲುಮೆ.

ಮಾತಿನಂತೆ ಮನ, ಮಾಟದಲ್ಲಿ ಘನ
ಧ್ಯೇಯವೊಂದೆ ಪ್ರಾಯ;
ನ್ಯಾಯ-ನೀತಿ-ನೆಲೆ, ಪ್ರೀತಿ-ಸ್ನೇಹ-ಕಲೆ
ಮಾನವತೆಯ ಶ್ರೇಯ.

ಯಾವ ಕಾಲಕೂ.....

ಜಗದ ಹರವು, ಜೀವನದ ತೆರವು, ತುಂ-
ತುಂಬಿ ಯುವ ಜನಾಂಗ,
ತಲೆಮಾರಿಗೊಂದು ಹೊಸ ಅಲೆಯು ಬಂದು
ನಿರ್ಮಲವು ನಾಟ್ಯರಂಗ.

ಯಾವ ಕಾಲಕೂ ......

ಮಲೆತು ನಿಂತ ಕೊಳೆ ತೊಳೆದು ಹೊಚ್ಚ ಹೊಸ
ಬೆಳಕಿನತ್ತ ನಡಿಗೆ -
ಜನದ ಬದುಕಿನಲಿ ಬೆರೆತು, ಬೇರು, ಎಲೆ -
ಮಣ್ಣು -ಹೊನ್ನ ಕೊಡುಗೆ.

ಯಾವ ಕಾಲಕೂ, ಯಾವ ದೇಶಕೂ
ಯುವಕ ಶಕ್ತಿ ಚಿಲುಮೆ;
ಇಳೆಗೆ ಇಳಿದು, ಆ ನಭಕೆ ಬೆಳೆದು, ಜಗ
ಕಾಸಿ ಬಡಿವ ಕುಲುಮೆ.

ಹೆಸರಾಯಿತು ‘ಕರ್ನಾಟಕ’

ಹೆಸರಾಯಿತು ಕರ್ನಾಟಕ
ಉಸಿರಾಗಲಿ ಕನ್ನಡ;
ಹಸಿ ಗೋಡೆಯ ಹರಳಿನಂತೆ
ಹುಸಿಹೋಗದ ಕನ್ನಡ.

ಹೊಸೆದ ಹಾಗೆ ಹುರಿಗೊಳ್ಳುವ
ಗುರಿ ತಾಗುವ ಕನ್ನಡ;
ಕುರಿತೋದದ ಪರಿಣತಮತಿ -
ಅರಿತವರಿಗೆ ಹೊಂಗೊಡ.

ಘಡುಗಡಲಿನ ತೆರೆಗಳಂತೆ
ಹೆಡೆ ಬಿಚ್ಚುತ ಮೊರೆಯುವ,
ಸಹ್ಯಾದ್ರಿಯ ಶಿಖರದಂತೆ
ಬಾನೆತ್ತರ ಕರೆಯುವ.

ಗುಡಿ-ಗೋಪುರ ಹೊಂಗಳಸಕೆ
ಚೆಂಬೆಳಕಿನ ಕನ್ನಡ;
ನಮ್ಮೆಲ್ಲರ ಮೈಮನಸಿನ
ಹೊಂಗನಸಿನ ಕನ್ನಡ.

ತ್ರಿಪದಿಯಿಂದ ಸಾಸಿರಪದಿ
ಸ್ವಚ್ಛಂದದ ಉಲ್ಲಾಸ;
ಭಾವಗೀತೆ, ಮಹಾಕಾವ್ಯ
ವೀರ-ವಿನಯ ಸಮರಸ.

ಹಳ್ಳಿ, ಊರು, ನಗರ, ಜಿಲ್ಲೆ
ಮೊಗದ ಹೊಗರು ಕನ್ನಡಿ;
ಎಲ್ಲ ದಿಸೆಗು ಚೆಲ್ಲುವರಿದ
ಚೈತನ್ಯದ ದಾಂಗುಡಿ.

ಹೆಸರಾಯಿತು ಕರ್ನಾಟಕ
ಉಸಿರಾಗಲಿ ಕನ್ನಡ;
ಹಸಿ ಗೋಡೆಯ ಹರಳಿನಂತೆ
ಹುಸಿ ಹೋಗದ ಕನ್ನಡ.

ವಂದನ

ಮುಗಿಲಿನ ಜಗುಲಿಗೆ ಭೂಮಿಯನೆತ್ತುವ
ಸೂರ್ಯ-ಚಂದ್ರ ಸಮದೃಷ್ಟಿ ನಮೋ;
ಹಗಲಿರುಳಿಗೆ ನೊಗ ಹೂಡಿ, ರೂಢಿ ಹದ-
ಗೊಳಿಸುವ ಬದುಕಿನ ಕೆಳೆಗೆ ನಮೋ.

ಕತ್ತಲೆ - ಮುಡಿ ನಕ್ಷತ್ರ ಹೊಳೆವ ಬಾ-
ನೆತ್ತರ ಕರುಣೆಯ ಕಾಂತಿ ನಮೋ;
ತಂಗಾಳಿಗೆ ಸುಮ ಸೌರಭವರಳಿಸಿ
ಹೊರಳುವ ಬೆಳಗಿನ ಶಾಂತಿ ನಮೋ.

ಗುಡುಗು, ಮಿಂಚು, ಮಳೆ, ಗಾಳಿ, ಓಲಗವ
ಗೈವ ನಿರ್ಮಲಾಗಸವೆ ನಮೋ;
ಎಲ್ಲ ಅಲ್ಲ-ಕಲ್ಲೋಲದಲ್ಲು ಕೈ-
ಗೂಡಿ ಬಂದ ಸಂಬಂಧ ನಮೋ,

ಬಿಸಿಲು ಸೋಸಿ ಬೆಳುದಿಂಗಳೆಸೆವ
ಸರ್ವಾಂಗ ಸುಖದ ಸಂತೃಪ್ತಿ ನಮೋ;
ನವೋದಯದ ನವರಸದ ಜೀವ ನಸು-
ನಗುವ ಬಗೆಯ ಚಿತ್ಕಳೆಗೆ ನಮೋ.

ನನ್ನ ದೇಶ, ನನ್ನ ಜನ

ನನ್ನ ದೇಶ, ನನ್ನ ಜನ
ನನ್ನ ಮಾನ, ಪ್ರಾಣ, ಘನ
ತೀರಿಸುವೆನೆ ಅದರ ಋಣ
ಈ ಒಂದೇ ಜನ್ಮದಿ?

ಕೆಂಪು -ನೆಲದ ಹಸಿರು ಬೆಳೆ
ಕಪ್ಪು ಮಣ್ಣು ಮೊಗದ ಕಳೆ
ಸೂರ್ಯ ಚಂದ್ರ ಚಿಕ್ಕೆಗಳೆ
ನಮ್ಮ ಹಿರಿಯ ಒಕ್ಕಲು.

ನೂರು ಭಾವ, ಭಾಷೆ, ನೆಲೆ
ನೂರು ಬಣ್ಣ, ವೇಷ, ಕಲೆ
ಸ್ವಚ್ಛಂದದ ಹಕ್ಕಿಗಳೆ
ನಮ್ಮ ಹಾಡು ಬದುಕಲು.

ಪ್ರಾಚೀನವ ತಿಕ್ಕಿ ತೊಳೆ
ವರ್ತಮಾನ ಜೀವಕಳೆ
ಉಕ್ಕೇರಲಿ ಬಾಳ ಹೊಳೆ
ಆ ಭವಿಷ್ಯದೊಡಲಿಗೆ.

ಮೈ ಕೊಡವಿದೆ ಮೂಕ ಜನ,
ಕೈ ಹಿಡಿಯಿರಿ ನಾಕು ಚಣ
ಎದ್ದೇಳಲಿ ಎಲ್ಲಗುಣ
ಆ ಸಮೃದ್ಧ ಬಾಳಿಗೆ.

ಮಕ್ಕಳು - ಮಾನವತೆ

ಮಿಡಿ ಮಾವಿಗೆ, ಹಿಡಿ ಹೂವಿಗೆ
ನುಡಿ-ಗೊಂಚಲ ಕೊಡುಗೆ;
ಚಿಣ್ಣರ ಪಡೆ, ಚಿಮ್ಮುವ ನಡೆ
ತಳಿರಿನ ಹೊಂದೊಡುಗೆ.

ಗಿಳಿವಿಂಡಿನ ಕಿಲಿಕಿಲಿ ರವ
ಕೋಗಿಲೆಗಳ ಕಹಳೆ;
ಮರಿದುಂಬಿಯ ಝೇಂಕಾರಕೆ
ಮಲ್ಲಿಗೆ ಬಿರಿಮುಗುಳೆ.

ಬಿರುಬಿಸಿಲಿಗೆ, ಮಳೆಗಾಳಿಗೆ
ತೂಗಾಡಲಿ ರೆಂಬೆ;
ಹೊಯ್ದಾಡಲಿ, ಬೈದಾಡದಲಿ
ಮುದ್ದಿನ ಮಾತೆಂಬೆ.

ಕಸುಗಾಯಿಗೆ, ಹೊಸಬಾಯಿಗೆ
ರಸದುಂಬಲಿ ಕಾಲ;
ಪಾಡಾಗಲಿ ಹಾಡಿನ ಜೊತೆ
ಹೊಸ ಹೆಜ್ಜೆಯ ಮೇಳ.

ಗುದ್ದಾಡಲಿ, ಮುದ್ದಾಡಲಿ
ಬಿದ್ದೇಳಲಿ ತುಂಟ;
ಗೆಳೆತನದಲಿ ತಲೆದೂಗಲಿ
ಇವ ನಾಡಿಗೆ ಬಂಟ.

ಈ ಹೊಳೆಯುವ ಕಣ್ಣಂಚಿಗೆ
ಬಾನಂಚಿನ ಮಿಂಚು;
ಈ ಸೃಷ್ಟಿಯ ಹೊಸದೃಷ್ಟಿಯ
ಬೆಳೆದವರಿಗು ಹಂಚು.

ಕನ್ನಡನುಡಿ, ಭಾರತಗುಡಿ
ವಿಶ್ವದ ಹೊಂಬೆಳಕು
ಮಕ್ಕಳ ಬಗೆ ಉಕ್ಕೇರಲಿ
ಮಾನವತೆಯೆ ಬದುಕು.

ಹರುಷವೆಲ್ಲಿದೆ?

ಹಗಲು ಇರುಳು ಜಾರುತಿವೆ
ದಿನ ದಿನಗಳು ಉರುಳುತಿವೆ
ವರುಷ ವರುಷ ತೆರಳುತಿವೆ
ಹರುಷವೆಲ್ಲಿದೆ?

ಮಾಡುವ ಪ್ರತಿ ಮಾಟದಲ್ಲಿ
ಮೈಮನಗಳ ತೊಡಗಿಸಿ,
ಸುತ್ತು ಹರಿವ ನೋಟದಲ್ಲಿ
ಸ್ನೇಹಭಾವ ಚಿಗುರಿಸಿ,
ಹಳತಿನಿಂದ, ಹೊಸತಿನಿಂದ
ಒಳಿತನೆಲ್ಲ ಅರಗಿಸಿ
ಬೆಳೆವ ತುಂಬು ಬದುಕಿನಲ್ಲಿ
ಹರುಷವಿಲ್ಲಿದೆ!

ಮಾತಿನಲ್ಲಿ ಕೃತಿಯ ಹೊಳಪು
ಮರೆಯಲಾರದುಪಕೃತಿ;
ವಿನಯಕಿಲ್ಲ ಬೇರೆ ಒನಪು
ಸಹಜ ಭಾವ ಸಂಸ್ಕೃತಿ.
ಅಂತರಂಗದಪ್ಪುಗೆಯಲಿ
ಪ್ರೀತಿ ಸೆಲೆಯನುಕ್ಕಿಸಿ,
ದಯೆಯ ದಿವ್ಯ ಅನುಭವದಲಿ
ಹರುಷವಿಲ್ಲಿದೆ!

ತುಂಬಿರಲೀ ಮನೆ

ತುಂಬಿರಲೀ ಮನೆ, ತುಂಬಿರಲಿ
ಬಂಧುಬಳಗಕೆಲ್ಲಿಂಬಿರಲಿ;
ಒಂದೆ ಮರದ ಹಲ ಕೊಂಬೆಗಳಂದದಿ
ಏಕ ಜೀವರಸ ಹೊಂದಿರಲಿ.

ಉನ್ನತ ಭಾವದ ಬಾಗಿಲು ತೆರೆದು
ಸ್ನೇಹ ಸುಗಂಧವು ಹರಡಿರಲಿ;
ಕಿಡಕಿಯ ಕಣ್ಣಿಗೆ ದೂರ ದಿಗಂತದ
ವಿಶಾಲ ಕಲ್ಪನೆ ಮೂಡಿರಲಿ.

ಬೆಳಗು - ಬೈಗು ಹೊಂಬಿಸಿಲಿನ ಕಾಂತಿಯು
ಮಕ್ಕಳ ಮೊಗವನು ಚುಂಬಿಸಲಿ;
ಹಿರಿಕಿರಿಯರ ಸುಖ-ದುಃಖ ಸಮಾಗಮ
ಸಾಮರಸ್ಯ ಪ್ರತಿಬಿಂಬಿಸಲಿ.

ಮಾವು, ತೆಂಗು, ದಾಳಿಂಬದ ರೆಂಬೆಗೆ
ಹಕ್ಕಿ ಹಾಡುಗಳು ತೂಗಿರಲಿ;
ಈ ಮನೆಯಂಗಳ ಹೂವರಳುವ ತೆರ
ನೀರೆರೆಯುವ ಸುಖ ನನಗಿರಲಿ.

ಆಗು

ಎಲ್ಲ ದಳಗಳೂ ಒಂದೆ ದೇಟಿನಲಿ
ಮಾಟಗೊಂಡ ಮೃದು ಹೂವಾಗು;
ಎಲ್ಲ ಹೂವುಗಳ ಪರಿಮಳ ಹೀರುತ
ಒಂದೆ ಹುಟ್ಟಿನಲಿ ಜೇನಾಗು.

ಹಲವು ಹಕ್ಕಿಗಳ ಗೂಡಿಗೆ ಕರೆಯುವ,
ಹಣ್ಣನೀವ ಹೆಮ್ಮರವಾಗು;
ಹಾರಿದನಿತು ವಿಸ್ತಾರಕೇರುವಾ
ಹಾಡ ಬಿಡುಗಡೆಯ ಬಾನಾಗು.

ಎಲ್ಲೊ ಹುಟ್ಟಿ ಮತ್ತೆಲ್ಲಿಗೊ ಹರಿದರು
ಎಲ್ಲ ಜೀವಿಗಳ ಸೆಲೆಯಾಗು;
ಬೆಟ್ಟ-ಕಡಲುಗಳ ತೊಟ್ಟಿಲು ತೂಗುವ
ಅಂತಃಕರಣದ ನೆಲೆಯಾಗು.

ಆಗು-ಹೋಗುಗಳ ಮೇಗೂ ಕೆಳಗು
ಒಟ್ಟಿಗೆ ಸಾಗುವ ಗುರಿಯಾಗು;
ಮಾಗಿದ ಭಾವದ ಜೀವದ ತಂತಿಗೆ
ಝೇಂಕಾರದ ಸುಸ್ವರವಾಗು,

ಹೂವು ಹೊರಳುವವು ಸೂರ್ಯನ ಕಡೆಗೆ

ಹೂವು ಹೊರಳುವವು ಸೂರ್ಯನ ಕಡೆಗೆ
ನಮ್ಮ ದಾರಿ ಬರಿ ಚಂದ್ರನವರೆಗೆ;
ಇರುಳಿನ ಒಡಲಿಗೆ, ದೂರದ ಕಡಲಿಗೆ
ಮುಳುಗಿದಂತೆ, ದಿನ ಬೆಳಗಿದಂತೆ
ಹೊರಬರುವನು ಕೂಸಿನ ಹಾಗೆ.

ಜಗದ ಮೂಸೆಯಲಿ ಕರಗಿಸಿ ಬಿಡುವನು
ಎಲ್ಲ ಬಗೆಯ ಸರಕು;
ಅದಕೆ ಅದರ ಗುಣದೋಷಗಳಂಟಿಸಿ
ಬಿಡಿಸಿಬಿಟ್ಟ ತೊಡಕು.

ಗಿಡದಿಂದುದುರುವ ಎಲೆಗಳಿಗೂ ಮುದ,
ಚಿಗುರುವಾಗಲೂ ಒಂದೆ ಹದ,
ನೆಲದ ಒಡಲಿನೊಳಗೇನು ನಡೆವುದೋ
ಎಲ್ಲಿ ಕುಳಿತಿಹನೊ ಕಲಾವಿದ!

ಬಿಸಿಲ ಧಗೆಯ ಬಸಿರಿಂದಲೆ ಸುಳಿವುದು
ಮೆಲು ತಂಗಾಳಿಯು ಬಳಿಗೆ;
ಸಹಿಸಿಕೊಂಡ ಸಂಕಟವನು ಸೋಸಲು
ಬಂದೆ ಬರುವುದಾ ಗಳಿಗೆ.

ಸಹಜ ನಡೆದರೂ ಭೂಮಿಯ ಲಯದಲಿ
ಪದಗಳನಿರಿಸಿದ ಹಾಗೆ;
ವಿಶ್ವದ ರಚನೆಯ ಹೊಳಹಿನಲ್ಲಿ
ಕಂಗೊಳಿಸಿತು ಕವಿತೆಯು ಹೀಗೆ.

ಹಲವು ಬಣ್ಣಗಳ

ಹಲವು ಬಣ್ಣಗಳ ಕಣ್ಣಿಗೆ ಕಾಣಿಸಿ
ಹಗಲಿಗೆ ಬೆಳ್ಳಗೆ ಹೊಳೆದವನೇ
ಇಳೆಯ ಹಸಿರಿನಲಿ ಹೂಗಳ ಪೋಣಿಸಿ
ಬಾಳಿನುದ್ದಕೂ ಬೆಳೆದವನೇ.

ಮೂಡಣ ದಿಕ್ಕಿನ ಹಾಡುವ ಹಕ್ಕಿಗೆ
ಜೋಡಿ ರೆಕ್ಕೆಗಳ ಕೊಟ್ಟವನೇ
ಮುಳುಗುವ ನೆವದಲಿ ಬೆಟ್ಟದ ಮೌನಕೆ
ಚಿನ್ನ -ಕಿರೀಟವನಿಟ್ಟವನೇ.

ಒಳಗೂ ಹೊರಗೂ ಉರಿಯುವ ದ್ವೇಷಕೆ
ಗುಡುಗಿ ಮಿಂಚಿ ಮಳೆಗರೆದವನೇ
ಬರಿದಾಗಿಹ ಕೆರೆತೊರೆಗಳ ತುಂಬಿಸಿ
ಎದೆಯೊಳು ಜುಳು ಜುಳು ಹರಿದವನೇ.

ದುಡಿದು ದಣಿದ ಮೈ-ಕೈಗಳ ತೀಡುತ
ಇರುಳು ಕತ್ತಲೆಯ ಕಳೆದವನೇ
ನಿದ್ದೆಯಾಚೆಗಿನ ಕನಸಿನ ದಂಡೆಗೆ
ದೋಣಿಯಾಗಿ ಜೊತೆಗುಳಿದವನೇ
ವಂದನೆ, ವಂದನೆ, ವಂದನೆ.

ಗೆರೆಗಳೆ

ಗೆರೆಗಳೆ, ಓ ಗೆರೆಗಳೆ!
ಬಾನಿಗೇರಿದ ಗರಿಗಳೆ,
ಕನಸುಗೂಡಿನ ತತ್ತಿ ಭಾವದ
ಕಾವಿಗೊಡೆದಿಹ ಮರಿಗಳೆ.

ಬೆಟ್ಟ ದೆದೆ ಚಿಮ್ಮಿರುವ ಝುರಿಗಳೆ,
ಗುಪ್ತಗಾಮಿನಿ ತೊರೆಗಳೆ,
ಸುಪ್ತಮಾನಸದಂಚು ಜುಮ್ಮೆನೆ
ಬಂದು ತಾಗುವ ತೆರೆಗಳೆ.

ಜೀವನದ ಅರೆ-ಕೊರೆಗಳೆ
ಯೌವನದ ಹೆಗ್ಗುರಿಗಳೆ
ಮೂಕವೇದನೆ ಬರೆಗಳೆ
ಆಜನ್ಮ ಸಾಲದ ಹೊರೆಗಳೆ,

ಬೆರಳು ಚಾಚಿದ ಮರಗಳೆ,
ಮೈ ತುಂಬ ಹರಿಯುವ ನರಗಳೆ,
ನೂರು ಹಕ್ಕಿಯ ರೆಕ್ಕೆಯೊಳಗಡೆ
ಮಿಡಿವ ಜೀವಸ್ವರಗಳೆ.

ವಿಶ್ವದೊಲುಮೆ

ಆಗೊಂದು ಸೆಳವಿತ್ತು
ಹೊಸ ಹರಯದಿ-
ಈಗ ತುಂಬೊಲವಿನಲಿ
ಹರಿಯುವ ನದಿ.

ಬಾನು ಮಿಂಚಿತು ತಾನೆ
ಮೋಡದೊಡಲು,
ಗುಡುಗಿನಬ್ಬರದೊಡನೆ
ಮಳೆಯ ಹೊನಲು.

ಬರಸೆಳೆದು ಭೂಮಿಯನು
ಮುತ್ತಿ ಬಿಡಲು,
ತೇಲಿತ್ತು, ಮುಳುಗಿತ್ತು
ಹಗಲು - ಇರುಳು.

ಮುಂಜಾವದೆಳೆವಿಸಿಲು
ಅಲ್ಲಿ ಮೊಗ್ಗೆ,
ಹೂವಾಗಿ ಅರಳಿತ್ತು
ಇಲ್ಲಿ ಹಿಗ್ಗೆ.

ಹಾರಿದವು ಹಕ್ಕಿಗಳು
ರೆಕ್ಕೆ ಬೀಸಿ;
ದಿಕ್ಕೆಲ್ಲ ಹಾಡುಗಳೆ
ತುಂಬಿಸೂಸಿ.

ಮಮತೆ, ವಾತ್ಸಲ್ಯ ಸೆಲೆ
ಝರಿ - ತೊರೆಗಳು,
ಬಂದು ಕೂಡಿದವೆಲ್ಲ
ಇದರ ಮಡಿಲು.

ಎರಡು ದಡಕೂ ತಂಪು
ಸೊಂಪು ತೋಟ,
ವಿಶ್ವದೊಲುಮೆಯ ಜೊತೆಗೆ
ಜೀವದಾಟ.

ನಾಡಿನ ಉದಯದ ಹಬ್ಬ

೧

ನಾಡಿನ ಉದಯದ ಹಬ್ಬದ ಹರುಷಕೆ
ಹಾಡಿನ ತೋರಣ ಕಟ್ಟೋಣ;
ಸೋದರ ಭಾವದ ಸಾಲುದೀಪಗಳ
ಮೂಲೆ ಮೂಲೆಯಲಿ ಬೆಳಗೋಣ.

೨

ಕಲಾಕುಸುಮಗಳ ಚೆಲುವಿನ ಸೃಷ್ಟಿಯ
ಮಲಿನವಾಗದೊಲು ಕಾಯೋಣ;
ನಿಚ್ಚ ಹರಿದು ನೆಲ ಹಚ್ಚಗೆ ತಣಿಸುವ
ಜೀವನದಿಗಳಲಿ ಮೀಯೋಣ.

೩

ನಾಡು-ನುಡಿಗೆ ಹೋರಾಡಿದ ಹಿರಿಯರು
ಕಂಡ ಕನಸುಗಳ ಮುಡಿಯೋಣ;
ಹಿಂದಿನ ವೈಭವದಲಿ ಮೈಮರೆಯದೆ
ಸ್ವಂತ ಶಕ್ತಿಯಲಿ ದುಡಿಯೋಣ.

೪

ಸಣ್ಣತನದ ಸೋಂಕಿಲ್ಲದೆ ಬೆಳೆಯುವ
ಚಿಣ್ಣರ ಲೋಕವ ತೆರೆಯೋಣ;
ಕನ್ನಡ ಬಾನೊಳು ನವ ಅರುಣೋದಯ
ಹೊಸ ಇತಿಹಾಸದ ಬರೆಯೋಣ.

ಬೆಳಕು - ಬೆರಗು

೧

ಗಾಳಿ -ಬೆರಳುಗಳಿಂದ
ಆ ಮಹಾಕಾಶವಿದೊ
ಸೋಕುತಿದೆ ಈ ನೆಲದ, ಜಲದ ಮೈಯ,
ಪುಟ್ಟ ಎದೆ ಜಗದಗಲ
ಬಾಯ್‌ಬಿಟ್ಟು ನೋಡುತಿದೆ
ಆಕಾಶಗೊಡ್ಡಿ ಕೈಯ

೨

ಜಗದ ಪಾತ್ರೆಯ ಹರವು
ತೆರವಾಗಿ ತುಂಬುತಿದೆ
ವಿಶ್ವಗಾನದನಂತ ಸೆಲೆಗಳಿಂದ
ಗಿರಿ, ಕೊಳ್ಳ, ಕಾನು, ಆ
ಬಾನು, ಅದರೊಳು ನಾನು-
ನೀನು ತಿಂಗಳ ಜೇನು ಹನಿಗಳಂದ.

೩

ನೆಳಲು - ಬೆಳಕಿನ ಹಿಂದೆ
ಸುಳಿವು ಹಿಡಿಯುತ ಬಂದು
ಕಣ್ಣು ಕೊರಳಿಗೆ ತಾಗಿ ಮಿಂಚು - ಬೆರಗು,
ಯಾರು ಹಾಯದ ಹಾದಿ-
ಯಲ್ಲಿ ಕಾಯುತ ನಿಂತೆ
ಮುಂಜಾವೊ, ಸಂಜೆಯೋ, ಅರಳು-ಮರಳು.

೪

ಬಾನು ಬಗೆ ತೆರೆದು
ಭರವಸೆಯ ನರುಗಂಪಿನಲಿ
ನಗೆತೂರಿ ಬರುವಾಗ ಜೀವ ಬೆರಗು,
ಮೋಡ ಮೋಡಗಳಲ್ಲಿ
ಬೆಳಕು - ಬಂಗಾರ ಹುಡಿ
ನೋಡ ನೋಡುತ ಸುರಿಯಿತೆಲ್ಲ ಕಡೆಗು.

ಜಯಭಾರತ ವಂದೇ

೧

ನುಡಿ ಮಿಡಿದಿವೆ ನೂರು ತಂತಿ
ಸ್ವಾತಂತ್ರ್ಯದ ವರ್ಧಂತಿ -
'ವಂದೇ ಜಯಭಾರತ ವಂದೇ'
ಪ್ರೇಮಾಯತ ಶಾಂತಿದೂತ ಕರುಣಿಸು ಓ ತಂದೇ
ನಿನ್ನಡಿಯಲಿ, ನಿನ್ನುಡಿಯಲಿ
ನಾವೆಲ್ಲರು ಒಂದೇ
ಜಯಭಾರತ ವಂದೇ.

೨

ಹಿಮಗಿರಿಗಳ ಧವಳ ಕೀರ್ತಿ
ಸಹ್ಯಾದ್ರಿಗು ಸ್ಫೂರ್ತಿ
ಮೂರು ಬದಿಗು ಮೊರೆವ ಕಡಲು, ನಡುವೆ ಈ ಧರಿತ್ರಿ,
ನೂರು ನದಿಯ ಹೃದಯ ತುಂಬಿ
ಹರಿವ ಜೇನು ವಾಹಿನಿ,
ಸರ್ವಧರ್ಮ ಸಮದರ್ಶಿನಿ
ಜಯಭಾರತಿ ವಂದೇ.

೩

ಉತ್ತರದಲಿ, ದಕ್ಷಿಣದಲಿ
ಪೂರ್ವದಲ್ಲಿ, ಪಶ್ಚಿಮದಲಿ
ಹೃದಯತುಂಬಿ ಪುಷ್ಪಾಂಜಲಿ
ಸರ್ವಕಲಾ ಸೌಂದರ್ಯದ, ಔದಾರ್ಯದ ಗಣಿಯೇ
ವಿಶ್ವದ ಕಣ್ಮಣಿಯೇ
ಜಯಭಾರತ ಜಯಭಾರತ ಜಯಭಾರತ ವಂದೇ
ಈ ತ್ರಿವರ್ಣ ಧ್ವಜದ ಕೆಳಗೆ
ನಾವೆಲ್ಲರು ಒಂದೇ.

೪

ಪುರಾತನವು ಚಿರನೂತನ
ಸಹಜೀವನ ಚೇತನ;
ವಿವಿಧ ವೇಷ, ವಿವಿಧ ಭಾಷೆ
ಸರಸ್ವತಿ ನಿಕೇತನ.
ಸೌಹಾರ್ದದ ಸ್ವರ್ಣ ದೀಪ್ತಿಯೊಳಗೆ ದಿವ್ಯ ಮೂರುತಿ
ನಮೋ ತಾಯಿ ಭಾರತಿ.
ಸ್ವಾತಂತ್ರ್ಯದ ಸಂಗ್ರಾಮದಿ
ಸ್ವರ್ಣೋತ್ಸವ ಸಂಭ್ರಮದಲಿ
ಎಲ್ಲಿದ್ದರು ಹೇಗಿದ್ದರು ನಾವೆಲ್ಲರು ಒಂದೇ
ಜಯಭಾರತ ಜಯಭಾರತ ಜಯಭಾರತ ವಂದೇ.

ಆಕಾಶಬುಟ್ಟಿ

೧

ಹೊಗೆ ತುಂಬಿ
ನಗೆ ತುಂಬಿ
ಬಣ್ಣ ಬಣ್ಣದ ನವಿರು ಕಾಗದದ ಬುಟ್ಟಿಯಲಿ
ಜೀವ ತುಂಬಿ,
ದೂರ ಹಾರುವದೆಂಬ ಭರವಸೆಯ ನಂಬಿ,
ನಮ್ಮ ಹಿರಿಯಾಸೆಗಳ ಉರಿವ ಕಕ್ಕಡವಿಟ್ಟು
ಉತ್ಸಾಹ ಸಾಹಸಕೆ ರೂಪುಗೊಟ್ಟು
ಮೇಲುನಾಡಿಗೆ ತೇಲಬಿಟ್ಟೆವಿದೊ ಚೈತನ್ಯದಾಕಾಶಬುಟ್ಟಿ!
ಏರೂವದೊ
ಇಳಿಯುವದೊ
ಗಾಳಿಯಾಘಾತದಲಿ ಜೋಲಿ ಹೊಡೆದುರುಳುವದೊ?
ಮೈ ಸುಟ್ಟು ಕೊಳ್ಳುವದೊ,
ಕಾಣಲಾರದ ಕೊಳ್ಳದಾಳದಲಿ ಬೀಳುವದೊ -
ಆರು ಕಂಡಿಹರಿದನು?
ತಿಳಿಯಲಾರದ ಹದನು!
ಆದರೂ ಆದರೂ ಹಾರಿಸಿದೆವಿದನು!
ಹುಡುಗತನದುತ್ಸಾಹ ಕೊನೆಬಲ್ಲುದೇನು?

೨

ಆಕಾಶದ ಪ್ರಕಾಶದಲಿ ಎದೆಯ ತರೆದು
ಇಳೆಯ ಬಾಳಿನ ಹಂಗು ನೂಲು ಹರಿದು
ಮೇಲೆ ತೇಲಾಡುವುದ ಕಣ್ಣಾರೆ ಕಂಡು
ನನ್ನ ಬಗೆಯಾಶೆಗಳು ರೆಕ್ಕೆಗೊಂಡು
ಅಂಧಂ ತಮಸ್ಸಿನಲು ಬೆಳಕನುಂಡು

ಮುಗಿಲಲ್ಲಿ ಬಿತ್ತಿರುವ ಮುತ್ತುಗಳ ಬೆಳೆಯ
ಹಾಲುಗಳನು ಬಯಸಿ ಹಾರುತಿವೆ ಗೆಳೆಯ!
ಅದೊ ! ನೋಡು ನೋಡು
ಚಿಕ್ಕೆಗುರಿ ಬೆಂಬತ್ತಿ ಸಾಗಿರುವ ಕಿರುದೀಪಕಾವ ಕೇಡು?
ಇಳೆಯ ಬಾಳರಳಿ ಬಂಗಾರ ಭರಣಿಯು ತೇಲಿ
ಬೆಳ್ಳಿ ಚಿಕ್ಕೆಗೆ ತೆಕ್ಕೆ ಹಾಕಿಹುದು ನೋಡು!
ಬೆಳಕು ಬೆಳಕಿಗೆ ಮುತ್ತು ಕೊಟ್ಟಿಹುದು
ಆ ಪ್ರೀತಿ ಸೌರಭವೆ ತೋಳಬಂದಿ!
ಸೌಂದರ್ಯದಾನಂದವಿಲ್ಲಿ ಬಂದಿ.

೩

ದೀನ ಮಾನವ ರಚಿತ ಆಕಾಶಬುಟ್ಟಿ
ದಾನವರ ಬಿರುಗಾಳಿ ದಾಳಿಯನು ಮೆಟ್ಟಿ
ಬಾನವರನಪ್ಪಿ ಒಂದಾಗಿಹುದು ನೋಡು!
ನೋಡಿದೆಯ ಕವಿಯೆ?
ಊರ್ಧ್ವಮುಖಿಗಲ್ಲದಿದು ಉಳಿದವರಿಗಳವೆ?
ಆತ್ಮಬಲದೆದುರು ಮೇಣುಳಿದ ಬಲವೆ?
ಆಕಾಶಬುಟ್ಟಿಯೊಲು ಏಕಾಕಿಯಾದರೂ
ಎದೆಗೆದೆಯ ಹೊಂದೀಪ ಉದ್ದೀಪನಂಗೊಂಡು
ಬಾಳದ್ವೀಪದ ಬೆಳಗುವಂತೆ ಹಾಡು
ಎಂದೆಂದು ನೀನಿಂಥ ಹಾಡ ಹಾಡು!

ಕನ್ನಡ ಜ್ಯೋತಿಯ ದೀಪಗಳು

ನೃಪತುಂಗ ಪ್ರೇರಣೆಯ ಆದ್ಯ ಗ್ರಂಥದ ಸ್ಮರಣೆ -
ಕಾವೇರಿಯಿಂದ ಗೋದಾವರಿಯವರೆಗೆ ;
ನಾಡು-ನುಡಿ-ಗುಡಿ ತೇರು ಕವಿರಾಜ ಮಾರ್ಗದಲಿ
ಚೆಲುವ ಸುಭಟರ್ಕಳಿಗೆ ಅಭಿಮಾನದೊಸಗೆ.

ಕಾವ್ಯ ಧರ್ಮಕೆ ತುಡಿದು, ಮಾರ್ಗ-ದೇಸಿಯ ಬೆಸೆದು
ವಾಗ್ವಿಭವದುನ್ನತಿ ರಸಧ್ವನಿಯ ಮಿಡಿದು,
'ಒಂದೆ ಮಾನವ ಜಾತಿ' ಸ್ತಂಭ ದೀಪಿಕೆಯಂತೆ
ಪ್ರಜ್ವಲಿಸೆ, ಕನ್ನಡಕ್ಕೊಡೆಯನದೆ ಪೆಂಪು.

ರನ್ನ, ಕೃತಿಯೂ ಘನ್ನ, ಅತ್ತಿಮಬ್ಬೆಯ ಚಿನ್ನ-
ವೀರ-ಕರುಣೆಯ ನಾಟ್ಯ ನಿರ್ಮಾಣ ತಾಣ;
ಗುಣಕೆ ಮಚ್ಚರವಿರದೆ, ಉತ್ಸಾಹ ಬಚ್ಚಿಡದೆ
ಸಾಹಸ ಮಹೋನ್ನತಿಯ ಪಂಚಪ್ರಾಣ.

ಅನುಭಾವದಾಳದಲಿ ಜ್ಞಾನಶಿಖರದ ಬಿಂಬ
ಮಾತು ಜ್ಯೋತಿರ್ಲಿಂಗ, ನಿಸ್ಸಂಗ ಸಂಗ;
ಮತ ಪಂಥ ಮೀರಿ ಗಗನಾಂತರದ ಪೀಠದಲಿ
ಶೂನ್ಯ ಗುರು ಅಲ್ಲಮನ ಗುಡುಗಿನ ತರಂಗ.

ಭಕ್ತಿಭಾಂಡಾರಿ, ನಿರ್ಭಯದ ನಿಷ್ಠುರ ಭೇರಿ-
ವಿನಯ ಮಾರ್ದವ, ಸಮತೆ - ಸಂಗಮದ ವೀಣೆ
ಸಹಜ ನಿಜಗನ್ನಡದಿ ಅರಳಿ ವಚನೋದ್ಯಾನ
ಸಕಲ ಜೀವರ ಲೇಸು ಬಸವಣ್ಣನಾಣೆ.

ಅಳಿಬಳಗ, ಮಾಮರವೆ, ಕೋಕಿ, ಬೆಳುದಿಂಗಳೇ -
ಮಲ್ಲಿಕಾರ್ಜುನಗೊಲಿದ ಚೊಕ್ಕ ಮಾದೇವಿ;
ಮಧುರಭಕ್ತಿ-ವಿರಕ್ತಿ, ಭಾವಗೀತೆಯ ಚಿಲುಮೆ
ಸಾವಿಲ್ಲ, ಕೇಡಿಲ್ಲ ಸವಿಗನ್ನಡ ಧರಿತ್ರಿ.

ಸುರ ನರರ ತೊರೆದು, ಸರಳ ಸಾಮಾನ್ಯರಂಗಳಕೆ
ಉತ್ಸಾಹ, ಲಲಿತ, ಮಂದಾನಿಲದ ರಗಳೆ;
ಹೊಸದಿಕ್ಕಿನೆಡೆ ಕಾವ್ಯ ತುಂಗಭದ್ರೆಯ ಹೊನಲು,
ಶಿವಕವೀಂದ್ರಗೆ ಸಹಜ ಕ್ರಾಂತಿ ಕಹಳೆ.

ಧರ್ಮಬೋಧೆಯ ದಾಹ ಸೌಂದರ್ಯ ಪ್ರಜ್ಞೆಯಲಿ
ಕರಗಿ ಮಿರುಗಿದ ಯಶೋದುಂದುಭಿಯ ಚರಿತೆ;
ಜೀವನದದಮ್ಯತೆಗೆ, ವಿಧವಿಲಾಸದ ಪರಿಗೆ
ಜನ್ನ ದೃಷ್ಟಿಗೆ ಸೃಷ್ಟಿ ನೆಲದಾಳದೊರತೆ.

ಬಂಧ ಸುಂದರ, ದೃಷ್ಟಿ ಭಾಗವತ, ಜಟಿಲ ಜೀ-
ವನ, ಚಿತ್ಕಲಾಪದಿ ವೀರನಾರಾಯಣ;
ಕುಮಾರವ್ಯಾಸನ ದೇಸಿ ಎರಡೂ ದಡವ ಸೂಸಿ
ಜನಮನವ ನಿಚ್ಚ ಹಸುರಾಗಿಸಿದ ವರುಣ್ಣು

ಪಲ್ಲವಿಯು ಫುಲ್ಲೆನಿಸಿ ಹಾಡು - ಹೆಜ್ಜೆಯ - ಗೆಜ್ಜೆ
ಈಸಿ ಜೈಸುವ ಶ್ರದ್ಧೆ: ಉಳಿದ ಹಂಗೇಕೆ?
ತಂಬೂರಿ ನಾದ, ಚಿನ್ಮಯ ಧ್ಯಾನ ತನ್ಮಯದಿ
ಮೂರುತಿ ನಿಲಿಸಿ ಪುರಂದರ ದಿವ್ಯ ಶ್ರುತಿಗೆ.

ನಿಜಗುಣಿ ನಿಜಾನಂದ ವೀಣೆ, ಕನ್ನಡ ಜಾಣೆ -
ಜ್ಞಾನಚಿಂತಾಮಣಿಯ ಲೋಕ ವಿಖ್ಯಾತೆ,
ಪರಮಾನುಭವದ ಪರಮಾರ್ಥ ಬೆಟ್ಟವೆ ಶಂಭು -
ಬೆಳಗಿತು ಪರಂಜ್ಯೋತಿ, ನಿತ್ಯ ನಿಶ್ಚಲತೆ.

ಧಾರಿಣಿಯು ಕುಲದೈವ, ಸ್ವಾತಂತ್ರ್ಯ ಬಿಡದಿರುವ
ಎಲ್ಲರನು ಹಿಡಿದು ಅಲ್ಲಾಡಿಸುವ ಧೈರ್ಯ,
ಮನೆಮನೆಗು ತ್ರಿಪದಿ : ದೀಪಾವಳಿಯು, ಸಿಡಿಮದ್ದು,
ಎಲ್ಲರೋಗಕು ಮದ್ದು, ಸರ್ವಜ್ಞ ಆರ್ಯ.

ತ್ಯಾಗ - ಭೋಗದ ಮಹಾ ಸಾಂಗತ್ಯದೆರಕದಲಿ
ರತ್ನಮೌಕ್ತಿಕದಚ್ಚು ಭರತೇಶ ಮೂರ್ತಿ,
ಅಧ್ಯಾತ್ಮ ರಸವಂತರಂಗ, ಬಹಿರಂಗದಲಿ
ಪೂರ್ಣ ಜೀವನದರ್ಶಿ ರಸಚಕ್ರವರ್ತಿ.

ಚಿತ್ತ ಬತ್ತಿಯ ಹೊಸೆದು, ಜೀವದೆಣ್ಣೆಯನೆರೆದು
ಭಾವ ಪ್ರಕಾಶದಲಿ ಬದುಕಿಸುವ ಪ್ರೀತಿ;
ದೀಪಕ್ಕೆ ದೀಪ ಹೊತ್ತಿಸಿ ಕಾವ್ಯ ರೂಪಕದಿ
ಭವ್ಯ ಜೀವನದರ್ಶಿ ಕನ್ನಡ ಜ್ಯೋತಿ.

೨

ಕೃಷ್ಣಾವತಾರ

ವಸುದೇವ - ದೇವಕಿಯರಂತರ್ಭಾವದಿ ಭಗವಜ್ಯೋತಿಯು ಹೊತ್ತಿರಲು
ಗಾಳಿಮಳೆಯು, ಕಾರ್ಗತ್ತಲು, ಕಾರಾಗೃಹವೇ ಬಾಗಿಲು ತೆರೆದಿರಲು,
ತುಂಬಿದ ಯಮುನೆಯು ಇಂಬಾದಳು, ಬಾ 'ಅಂಬಾ' ಎಂದಿತು ಗೋಕುಲವು
ಶಂಖ, ಚಕ್ರ, ಗದೆ, ಪದ್ಮಧಾರಿ ಕೂಸಾಗಲು ಹರಿಯಿತು ವ್ಯಾಕುಲವು.

ಬೆಣ್ಣೆ ಮೊಸರು ತಿಂದಣ್ಣೆವಾಲು ಕುಡಿದಾಡಿದ ಗೋಪಾಲ
ಚಿಣ್ಣರ ಬಡಿಯುತ, ಹೆಣ್ಣನು ಕಾಡಿದ ಯಾರಿಗು ಇವ ಸೋಲ.
ಹಿಡಿ ಹಿಡಿಯೆಂದರೆ ಹಿಡಿಯಲಿ ಸಿಗುವನೆ ಬ್ರಹ್ಮಾಂಡವೆ ಆತ
ನವಿಲುಗರಿಯ ನವನೀತ ಚೋರನಾಬಾಲವೃದ್ಧಪ್ರೀತ.

ಹತ್ತಿ ತುಳಿದ ಕಾಳಿಂಗನ ಹೆಡೆಗಳ ಅಹಂಕಾರ ಹಿಳಿದು,
ಎತ್ತಿದ ಗೋವರ್ಧನ ಗಿರಿಯನು ಆ ಇಂದ್ರನ ಮುಖದೆದುರು.
ಕಾಮಧೇನು ಅಭಿಷೇಕಿಸೆ ಗೋಕುಲಕಧಿಪತಿ ಗೋವಿಂದ.
ಇಲ್ಲಿ ಹುಡುಕಿದರೆ ಅಲ್ಲಿ ತೋರುವನು ಎಲ್ಲೆಡೆ ಸ್ವಚ್ಛಂದ.

ದೈತ್ಯಬಾಹು ಮುಗ್ಧತೆಯನು ಹಿಸುಕಲು ಚಾಚಿತು ಹಲಬಾರಿ
ಪೂತನಿ, ಶಕಟಾಸುರ, ಯಮಳಾರ್ಜುನ, ಧೇನು ಪ್ರಲಂಬರ ತೋರಿ;
ರಾಕ್ಷಸರೂಪದ ಭೌತಿಕ ಶಕ್ತಿಯ ಗೋಪುರ ನೆಲಕುರುಳಿ
ಕಂಸಾಸುರನೆದೆ ಕುಸಿಯಿತು ಧರ್ಮದ ಕೃಷ್ಣಶಕ್ತಿ ಕೆರಳಿ.

ಬೃಂದಾವನದೆದೆಯ ಮಿಡಿದು
ಬಂತು ಕೊಳಲ ಮೆಲ್ಲುಲಿ-
"ಕೈಯೊಳಿದ್ದುದಲ್ಲೆ ಬಿಟ್ಟೆ
ಮೈಯನೆಲ್ಲಿ ಚೆಲ್ಲಲಿ?"
ಝುಣ್ ಝುಣ್ ಝುಣ ಝುಣೆರು ಕುಣಿವ
ಗೋಪಿಕೆಯರು ಸುತ್ತಲು

ಕೃಷ್ಣ - ರಾಸಕ್ರೀಡೆ-ಹಾಸ
ರಮಿಸಿ ನಮಿಸಿ ಮುಕ್ತರು.

ಕೊಳಲೂದಿದ ತುಟಿಗಳಲ್ಲಿ
ಪಾಂಚಜನ್ಯ ಪುಟಿಯಿತು.
ಕುರು - ಪಾಂಡವ - ಕುರುಕ್ಷೇತ್ರ
ಧರ್ಮಕೆ ಜಯವೆಂದಿತು.
ಆಯುಧವನು ಹೂಡದೇನೆ
ಆದ ಪಾರ್ಥಸಾರಥಿ,
ಯುದ್ಧವೆ ಸ್ಥಿರವಾದರೂನು
ಶಾಂತಿಗಾಗಿ ಧಾವತಿ.

ಭೀಷ್ಮ, ದ್ರೋಣ, ವ್ಯಾಸ, ವಿದುರ
ಭೀಮಾರ್ಜುನ, ಯುಧಿಷ್ಠಿರ
ದುರ್ಯೋಧನ, ಜರಾಸಂಧ
ಶಿಶುಪಾಲ ವಿಶಿಷ್ಟರ -
ಗುಣಶಕ್ತಿಯ ರಂಗದಲ್ಲಿ
ಕೃಷ್ಣ ಪ್ರಭೆಯ ಬೆರಗದೋ
ಪುಣ್ಯ ಪಾಪದೆಲ್ಲೆಗೆಟುಕ -
ದಂತೆ ನಿಂತ ನಿಲವದೋ.

ಶ್ರೀಕೃಷ್ಣನು ಸೂತ್ರಧಾರ
ನೂರು ಪಾತ್ರ ಕುಣಿದವು;
ಯಾರುಳಿದರು, ಯಾರು ಇಲ್ಲ?
ಯಾರ ಹೊಟ್ಟೆ ತಣಿದವು?
ಎಂತಾದರು ಈ ದುರಂತ-
ಕಿಹುದೆ ಕೊನೆಯ ಅಂಕವು?
'ಸಂಭವಾಮಿ ಯುಗೇ ಯುಗೇ'
ಅಗೋ ಧರ್ಮಚಕ್ರವು.

ಶರಣು ಅಮ್ಮ

ಮನೆಯೆ ಮಠವಾಗಿಹುದು -
ಹೊಸತಿಲೊಳಗೆ ;
ಕರುಣೆ ಹಣ್ಣಾಗಿಹುದು
ನೋಟದೊಳಗೆ.

ಎಲ್ಲೊ ಕಂಡಂತಿಹುದು
ಈ ಹುಣ್ಣಿಮೆ;
ಯಾರು ಬರೆದಿರಬಹುದು
ಈ ಕಣ್ಣಿಮೆ?

ಮೇಲೆ ಕುಳಿತವರಲ್ಲ -
ನೆಲದ ಮಮತೆ;
ಜೀವ ಸಾಮೀಪ್ಯದಲಿ
ಭಾವ ಸಮತೆ.

ನೋಡಿದ್ದು, ನುಡಿದದ್ದು
ಒಂದೆ ಗಳಿಗೆ;
ಇಳಿದಿರುವೆ ಇಂಗಿರುವೆ
ನನ್ನ ಒಳಗೆ.

ನಾವು ಬಾಗುವ ಮೊದಲೆ
ಕೈ ಮುಗಿವಿರಿ.
ನಿಮ್ಮ ಹೆಸರೇ ಶರಣು-
ಅಮ್ಮ, ಗೌರಿ.

ಹರಸಿದಿರಿ ಮೌನದಲಿ
ಹಣ್ಣು-ಕಾಯಿ;
ಮರೆಯುವೆವೆ ಆ ನಿಮ್ಮ
ಕಣ್ಣು, ತಾಯಿ !*

* ಸಜ್ಜಲಗುಡ್ಡದ ಶರಣಮ್ಮನವರ ದರ್ಶನ.

ಬಸವಣ್ಣನ ಬೆಳಗು

೧

ಎಂಟು ಶತಮಾನಗಳ ಶತಪತ್ರವರಳುತಿದೆ
ಎಂಟು ದಿಕ್ಕಿಗು ಗಂಧ-ಗಾಳಿ ತೀಡಿ,
ಗಗನದಲಿ ಗಂಟೆ ಜಾಗಟೆ ನುಡಿದು, ಈ ಜಗದ
ನಂಟ ಸಂಗಮದೇವ ಕಣ್ದೆರೆದ ನೋಡಿ.
ಕೃಷ್ಣಾ ಮಲಪ್ರಭೆಯರೊಡಲ ಮಡು ತಿಳಿಗೊಂಡು
ಮುಂಬರಿದು ತೊಳೆವ ಪಾದ
ಭಕ್ತಿ-ಜ್ಞಾನ-ಕ್ರಿಯೆಯ ರಂಗ ಕೂಡಲ ಸಂಗ
ಮಿಡಿವ ಮಂಗಲ ನಿನಾದ.

೨

ಬಾಗೆವಾಡಿಯ ಭಾಗ್ಯ ರೂಢಿಜಡತೆಯನೊಡೆದು
ತೋಡಿ ಮೂಡಣಕಂತರಂಗ ಮೊರೆಯೆ,
ಹರನ ಕರುಣೋದಯದ ಹೊಂಗಿರಣದಾರತಿಯು
ಸಂಗಮೇಶ್ವರಲಿಂಗ ಗರ್ಭಗುಡಿಗೆ.
ಉದಕದಲಿ ಬಚ್ಚಿಟ್ಟ ಬಯಕೆ ಕಿಚ್ಚಿನ ಕಿಡಿಯೊ-
ಲುರಿದೆದ್ದು ಬಂದ ಬಸವ
ಏಳು ಜನುಮದ ತಂದೆ ಏಳನೆ ಭವಾಂತರದಿ
ಬಂದಿಹನು ನವಮಾನವ.

೩

ಕರಗಿ ಕಾಳಿಕೆ ಕಳೆದು, ಒರೆಗೆ ಬಣ್ಣಕೆ ಬಂದು
ದಿಟಭಕುತಿ ಪುಟಗೊಂಡು ಗೆಲುವ ಭಾಷೆ:
ಕರುಣೆ - ಕಾರಂಜಿಯಲಿ ಸಕಲ ಜೀವರ ತೊಳೆದು
ಷಟ್‌ಸ್ಥಲದ ಸಂಪುಟದ ಕಂಪು ಸೂಸೆ -

ಏಳು ಮಂಗಳವಾಡಕೇಳು ಕಲ್ಯಾಣಕ್ಕೆ
ಏಳಯ್ಯ ಬೆಳಗಾಯಿತು;
ಏರಿಳಿತಗಳ ದಾಟಿ, ಶರಣಧರ್ಮದ ಭೇರಿ
ಹೊಗರೇರಿ ದುಂದುಮಿಸಿತು.

೪

ದೇಹ - ದೇಗುಲದೊಳಗೆ ಭಾವಶುದ್ಧಿಯ ಸೊಡರು
ಅರಿವು-ಲಿಂಗಕನಂತಕಾಲ ಪೂಜೆ;
ಕಾಯಕದಿ ಬಂದ ಎಡೆ, ನುಡಿ - ನಡೆಯ ಮೋಡ -ಮಳೆ
ಹೊಡಕರಿಸೆ ಕುಡಿಮಿಂಚು ವಚನದೋಜೆ.
ಅನುಭಾವದನುವಿಡಿದು ಅಂತರಾಳವ ಕಡೆದು
ಹೊಮ್ಮಿರುವ ಚಿಜ್ಜ್ಯೋತಿಯೆ
ಧರೆಯ ಮೇಲಣ ಶೂನ್ಯ ಸಿಂಹಾಸನವನೇರು
ಮುಗಿಲಗುರು ಗುಂಭ ದೊರೆಯೆ.

೫

ಜಂಗಮಪ್ರಸಾದಿ, ಸ್ವಯಲಿಂಗ, ಸಂಗನಬಸವ
ಲಿಂಗಗೊಂಚಲವೆತ್ತ ಭಕ್ತಿರಸವು,
ಲಕ್ಕ ಗಣಗಳ ಒಕ್ಕು ಮಿಕ್ಕ ಪ್ರಸಾದದಲಿ
'ಕುಕ್ಕು ಹೂ' ಬಯಲೆಲ್ಲ ಚಿಗುರು - ಹೂವು.
ಭವದ ಸಾರವ ಹೀರಿ, ದಿವದ ಬಣ್ಣವ ಬೀರಿ
ಮಗಮಗಿಸುತಿರುವ ಶರಣ-
ಇಲ್ಲಿ ಸಲ್ಲುತ ಎಲ್ಲ ಜೀವಭಾವವನಪ್ಪಿ
ಇಹ - ಪರಕೆ ಗುಡಿತೋರಣ.

೬

ಮರ್ತ್ಯದ ಮಹಾಮನೆಯ ಮಣಿಹ ಮುಗಿಯಿತು ತಂದೆ
ಕರ್ತೃ ಕೂಡಲಸಂಗನೊಡಲು ತೆರೆದು

ಹಳುವ ದಾಟಿದರುಳಿವೆ, ಹದುಳಗೊಂಡಿರೆ ಕದಳಿ
ಮಿಕ್ಕ ಪ್ರಮಥರ ಲಕ್ಷ್ಯ ದಿಕ್ಕಿಗೊಂದು.
ಬಯಲ ರೂಪಿಸಿ, ರೂಪ ಬಯಲಾಗಿ ತುಂಬು ಬೆಳೆ
ಕೊಯಲಾಗಿ ಸಂಗಮೇಶ -
ಕಲ್ಯಾಣದಲಿ ರಾಶಿ ಸೂರೆಗೊಂಡಿತು ಏಳು
ತಲ್ಲಣಿಸಿ ದೇಶ-ಕೋಶ.

೭

ಅವಧಿ ಮೀರಿದ ಮೇಲೆ ವ್ಯವಧಾನವೆಲ್ಲಿಯದು?
ಅವಧಾರು; ಬಚ್ಚಬರಿ ಬಸವರಾಜ,
ಕಪ್ಪಡಿಯ ಸಂಗಮದ ಅಂಗಳದ ಕೂಸಾಗಿ
ಆಡು ಕೂಡಲಸಂಗ ರಾಜತೇಜ.
ತುಂಬಿ ಕಂಗಳು ಮನವು, ಹೃದಯಕಮಲದಿ ತುಂಬಿ
ಸಂಗಮದಿ ತುಂಬು ಭರತಿ :
ಬೆಳಗಿನೊಳಗಣ ಮಹಾಬೆಳಗಿನಲಿ ಮುಳುಗೆದ್ದು
ಅರಳಿಹುದು ದಿವ್ಯಸ್ಮೃತಿ.

ಒಂದು - ಹಲವು

ಎಷ್ಟು ಹಣತೆಗಳಿಂದ ಕತ್ತಲೆಯು ಕರಗುವದು ?
ಎಷ್ಟು ಕವಿತೆಗೆ ಜಗದ ಕಣ್ಣು ತೆರೆಯುವದು?-
ಒಂದಿದ್ದರೂ ಸಾಕು, ಮನೆಗೆ ಬೆಳಕಾಗುವದು,
ಒಂದು ಕವಿತೆಗೆ ಕೂಡ ಮನ ಕರಗಬಹುದು.

ಹಲವು ಬಣ್ಣದ ಕಣ್ಣು ಸೆಳೆಯುವ ಗುಲಾಬಿಗಳು:
ಸುಂದರ ಪ್ರದರ್ಶನಕೆ ಕಸಿಗೊಂಡ ಒನಪು;
ಚೆಂಗುಲಾಬಿಯ ಕಂಪು, ಕೋಮಲತೆ ನಯವೊಂದೆ
ಕಣ್ಣು, ಮನಸಿಗೆ ತಣ್ಣಗೊಂದು ಸವಿನೆನಪು.

ಆಕಾಶದಲಿ ಹಲವು ಚಿಕ್ಕೆ ಚೆಲ್ಲಾಪಿಲ್ಲಿ -
ಬಿದಿಗೆ ಚಂದ್ರನ ಬದಿಗೆ ಒಂದೆ ಕಿರು ತಾರೆ.
ಉದಯಾಸ್ತಗಳ ಹೊನ್ನ ಬೆಳಕು ಚಿಮ್ಮುವ ತವಕ -
ತುಂಬಿ ತುಳಕದ ಹಾಗೆ ಈ ಕ್ಷಿತಿಜ ಮೇರೆ.

ಹಲವಕ್ಕೆ ತೆಕ್ಕೆ ಬಿದ್ದರೆ ಎಲ್ಲ ದಕ್ಕಬಹುದೆ?
ವೈವಿಧ್ಯಕ್ಕು ಒಂದೆಡೆಗೆ ಮಧ್ಯಬಿಂದುವಿರದೆ?

ಪ್ರಶ್ನೆ

ಮುಷ್ಟಿಯಲಿ ಜೀವ ಬಿಗಿ ಹಿಡಿದು ಮಲಗಿದೆ ಮಗುವು -
ಏಕೆ ಈ ಪರಿ ಕೆಂಪು ಕಣ್ಣ ತುಂಬ?
ಯಾವ ಜೀವದ ರಕ್ತ ಬಸಿದು ಬಾನಂಚಿನಲಿ
ಹೆಪ್ಪುಗಟ್ಟಿತು ಹೀಗೆ ಸೂರ್ಯ ಬಿಂಬ?

ಎಷ್ಟೊಂದು ಹಗಲು ಬರಿ ಹೆಗಲುಗೊಟ್ಟವೊ ನಿನಗೆ -
ಹುಗಿದು ಹೋದವೊ ಚಿಕ್ಕೆ ಮಿನುಗದಂತೆ!
ಕರುಳೆಂಬುದೊಂದು ಒಳಗೆಲ್ಲಿಯಾದರು ಇಹುದೆ?
ಮುಗಿಲೇಕೆ ಆಗಿಹುದು ಚಿಂದಿಬಟ್ಟೆ?

ಗಾಳಿಯಲಿ ಹಾರಿಹುದು ಕಪ್ಪು ಮಸಣದ ಬೂದಿ
ಹೋಳಿಯಾದವು ಎಲ್ಲ ಹುಣ್ಣಿಮೆಗಳು;
ಧೂಳಿಪಟವಾಗಿಹುದು ಬುದ್ಧಿ ಭೂಮ್ಯಾಕಾಶ -
ತೆರೆಯದಾಗಿದೆ ಕರುಣೆ - ಕಣ್ಣೆವೆಗಳು.

ಮುಖವಾಡವಿರದಂಥ ಮುಖವನರಸುತ್ತಿರುವೆ -
ಅದರ ಸಮ್ಮುಖದಲ್ಲಿ ದುಃಖ ಸುಖವೆ;
ಚೈತ್ರ, ವೈಶಾಖಗಳ ಮೈತ್ರಿಯಲಿ ಚಿಗುರೊಡೆದು
ವರುಷದುದ್ದಕು ಹೀಗೆ ಹೆಜ್ಜೆಯಿಡುವೆ.

ಆ ಹಾದಿ, ಈ ಹಾದಿ ಹುಡುಕಿ ಬೇಸತ್ತಾಗ
ಯಾವ ಮಾಯದಿ ಬಂದೆ ಓ ಯುಗಾದಿ?
ಊದುವ ಸನಾದಿಯಲಿ ಉತ್ಸವದ ದನಿಯಿಹುದು
ನಂಬಲೆ, ಮಂಗಲಕೆ ಇದು ಬುನಾದಿ?

ನಿಯಮೋಲ್ಲಂಘನ

೧

'ಸುಯ್' ಎಂದು ನಿಡುಸುಯ್ದು ಹುಯ್ಯಲಿಡುತಿದೆ ಗಾಳಿ
ಜಗದ ಆರ್ದ್ರತೆಯನ್ನೆ ಹೀರಿ ಹೀರಿ !
ಮೂಡಗಾಳಿಗೆ ಬಾನ ಮೊಗ ಒಡೆದು ಬಿಳಿ ಬೂದಿ
ಬಳಿದಂತೆ ತೋರುತಿದೆ ಮೇರೆ ಮೀರಿ.

೨

ತರು ಲತಾದಿಗಳಲ್ಲಿ ಚಿಗುರಿಲ್ಲ ಹೊಗರಿಲ್ಲ-
ಅಸ್ಥಿ ಪಂಜರವಾಗಿ ನವೆಯುತಿಹವು;
ಎಲ್ಲೊ ಅಂಗೈಯಗಲ ಹಸಿರು ಕಂಡರೆ ಸಾಕು
ಮನದ ಆಸೆಗಳಲ್ಲಿ ಸೇರುತಿಹವು.

೩

ಏನು ಬಾನೋ ಎನಿತು ದೂರವಿದ್ದಂತಿಹುದು
ನಮಗು ಅದಕೂ ಮಾತು-ಕತೆಯೆ ಇಲ್ಲ;
ಒಂದು ಮೋಡವೆ ? ಮಿಂಚೆ? ಮಳೆಯೆ? ಕಾಮನ ಬಿಲ್ಲೆ?
ಚಳಿಗಾಲಕೋ ಕೊಂಚ ಬುದ್ಧಿಯಿಲ್ಲ.

೪

ಕ್ಷಾಮ ಡಾಮರ ಬಡಿದ ನಿರ್ವಾಸಿತರ ತೆರದಿ
ಒಣಗಿದೆಲೆಗಳ ರಾಶಿ ಭಣಗುಟ್ಟಿವೆ;
ಮೈಕೊರೆವ ಚಳಿಗಾಳಿ ನಿಷ್ಕರುಣದಲಿ ದಾಳಿ -
ಗೈಯೆ ತರಗೆಲೆ ಮತ್ತೆ ಮೊರೆಯುತ್ತಿವೆ!

೫

ಹೇಮಂತ ಋತುವಿಂಗೆ ಸಾಮಂತ ರಾಜರೊಲು
ಸೂರ್ಯ ಚಂದ್ರರು ನಡುಗಿ ಉಡುಗುತಿಹರೊ!
ಧೀಮಂತ ವರ್ಷಋತು ಗುಡುಗು ಹಾಕುವವರೆಗೆ
ಬರಿಯ ನಾಮಾಂಕಿತರೆ ಮೆರೆಯಲಿಹರು!

೬

ಮೂರು ತಿಂಗಳ ಹಿಂದೆ ಮಳೆರಾಯ ಹಗಲಿರುಳು
ಧಾರಿಣಿಗೆ ತನಿಮುದ್ದುಗರೆಯುತ್ತಿದ್ದ;
ಹರುಷದಾವೇಶದಲಿ ಹೊನಲು ಧುಮ್ಮಿಕ್ಕಿರಲು
ಪ್ರೇಮಗೀತಗಳೆನಿತೊ ಹಾಡುತಿದ್ದ!

೭

ಮಳೆಗಾಲವೈತರಲು ನನ್ನ ಕವಿತೆಯ ನವಿಲು.
ನೂರು ಕಣ್ಣನು ತೆರೆದು ನರ್ತಿಸುವದು!
ಭಾವ ಚಾತಕ ಹೊಚ್ಚ ಹೊಸ ಮಳೆಯ ತಂಬನಿಯ
ಜೇಂಬನಿಯ ಗುಟುಕರಿಸಿ ವರ್ತಿಸುವದು!

೮

ಎಂದು ಬರುವದೊ ಕಾಲ ನನ್ನಿನಿಯ ಮಳೆಗಾಲ
ವಿರಹ ವೈಶಾಖವನು ದಾಟಬೇಕೆ?
ಏನು ಋತುರಿಂಗಣವೊ ವಿಧಿನಿಯಮದಾಳಿಕೆಯೊ
ಒಮ್ಮೆಯಾದರು ತಪ್ಪಿ ನಡೆಯದೇಕೆ?

ಚಿರಂತನ ದಾಹ

೧

ದಿನದಿನವು ಮೂಡಣದ ಬಾನ ಕರೆಯಂಚಿನಲಿ
ಚೆಂಬೆಳಕು ಉಬ್ಬರಂಬರಿಯುತಿಹುದು;
ನೂರು ಕಾರಂಜಿಗಳು ತೆಕ್ಕನೆಯೆ ಪುಟಿದಂತೆ
ಲೋಕಲೋಕಂಗಳನು ತೊಳೆಯುತಿಹುದು.

೨

ಬೊಗಸೆಗಂಗಳ ತೆರೆದು ಮೊಗೆ ಮೊಗೆದು ಕುಡಿದರೂ
ಈ ಪುರಾತನ ದಾಹ ತೀರದಲ್ಲಾ!
ಏನೊ ಅಸಮಾಧಾನ ಹೃದಯಾಂತರಾಳದಲಿ
ಬಾಯ್ದೆರೆದು ಹೀರುತಿರೆ ತೃಪ್ತಿಯಿಲ್ಲ:

೩

ಬಣ್ಣ ಬಣ್ಣದ ಬೆಳಕ ಕಡಲಿನೊಡನೊಳಗಲ್ಲಿ
ಕಲ್ಲುಸಕ್ಕರೆಯಂತೆ ಕರಗಿ ಬಿಡಲೆ?
ಇಲ್ಲದಿರೆ ಎಲ್ಲವನು ಒಂದೆ ಬೊಗಸೆಯೊಳಾಂತು
ಆ ಅಗಸ್ತ್ಯನ ತೆರದಿ ಕುಡಿದು ಬಿಡಲೆ?

೪

ಹೊಗೆನಟ್ಟು ಹೋಗಿರುವ ಮನದ ಮನೆ ಗೋಡೆಗಳು
ಸುಣ್ಣ ಬಣ್ಣವನೆಂದು ಕಾಣಬಹುದು?-
ಇಲ್ಲಣವು ಜೋತಿರುವ ಜೇಡಬಲೆ ನೂತಿರುವ
ಬೆಳಕಿಂಡಿಯಲಿ ಬೆಳಕದೆಂತು ಬಹುದು?

೫

ಪಂಚ ಭೂತಗಳೆಲ್ಲ ಮಾನವನ ದೇಹದಲಿ
ಹೊಂಚು ಹಾಕುತ ದಾರಿ ಕಾಯುತಿಹವು;
ಕಿಂಚಿತಾದರು ಕರುಣೆ ಕೊನರೊಡೆದು ಬಾರದಿರೆ
ಈ ಪ್ರಪಂಚವೆ ಚಿತೆಯನೇರಲಿಹುದು!

೬

ಕಿಟಕಿಗಳನರೆತೆರೆದು ಕಟಕಿಯಾಡುವ ಗಾಳಿ
ಮಾಡು ನಿನ್ನಯ ದಾಳಿ ಇಂದು ಇಂದೇ!
ಜಗದೆಲ್ಲ ಪುಷ್ಪಗಳ ಪೈರುಗಳ ಪರಿಮಳದ
ಪನ್ನೀರುಗಳನೆರೆದು ಮೀಯಿಸಿಂದೇ!

೭

ಜಗವ ತುಂಬಿದ ಬೆಳಕು ನಮಗೇಕೊ ಸಾಲದಿದೆ
ಎನಿತು ಮಾನವನೆದೆಯ ಆಳ ಅಗಲ !
ಬಂದಷ್ಟು ಇಂಗುತಿದೆ ಮತ್ತೆ ಬರಿದಾಗುತಿದೆ
ಎಷ್ಟು ಸೆಲೆಯೊಡೆದರೂ ವಿಫಲ ವಿಫಲ!

ಮೊದಲ ಮಳೆ

ಬಿಸಿಲೇರಿತು, ಬಾಯಾರಿತು
ಹುರುಪಳಿಸಿತು ನೆಲವು,
ಗುಟುಕರಿಸಿತು ಜಲವು;
ಬಾನುದ್ದಕು ಧೂಳೆದ್ದಿತು
ತತ್ತರಿಸಿತು ಬಲವು.
ಮುಚ್ಚಂಜೆಯು ಮೈಚಾಚಿತು,
ಗರಿಬಿಚ್ಚಿತು ಮೋಡ,
ಹೊರದಬ್ಬಿತು ಗೂಢ;
ಮುಂಗಾರಿನ ಮುಂಗೋಪಕೆ
ಬಾನೇ ದಿಙ್ಮೂಢ.

ಮಳೆವನಿಗಳ ಖುರಪುಟದಲಿ
ಮುಗಿಲಂಚನು ಸೀಳಿ
ಅಗೊ ಮಿಂಚಿನ ದಾಳಿ!
ಕಣ್ಮುಚ್ಚಿತು ಕಣ್ ತೆರೆಯಿತು
ಬಿಗಿದಪ್ಪಿತು ಗಾಳಿ.

ನೆಲ-ಬಾನಿಗೆ ಜಲವೀಣೆಗೆ
ಪಕ್ಕದೊಳೇ ನಿದ್ದೆ
ಬೆಳಗಾಯಿತು ಎದ್ದೆ -
ಜಗವೆಲ್ಲವು ಮಿದುಬೆಲ್ಲವು
ಅಗೊ ಮಲ್ಲಿಗೆ ಮೊಗ್ಗೆ.

ಹಸುರೆಲ್ಲವು ಕುಸುರಾಯಿತು
ಹೂ ಮುಡಿಯಿತು ಬೇಲಿ

ತಂಗಾಳಿಗೆ ತೇಲಿ;
ಸೌಂದರ್ಯವೆ ಮೊಗವೆತ್ತಿತು
ಮುತ್ತಿಟ್ಟಿತು ನೀಲಿ.

ಒಂದಿರುಳಿನ ಒಡನಾಟದಿ
ನೆಲದಾಳಕೆ ನೀರು
ಚಿಗಿಯಿತು ತಾಯ್‌ಬೇರು
ಇಡಿ ವರುಷದ ಹೊಸ ಹರುಷಕೆ
ಹೂಗನಸಿನ ತೇರು.

ಚಿಗುರಿತು ಈ ಹುಲುಗಲ

ಚಿಗುರಿತು ಈ ಹುಲುಗಲ -
ಶಿವ-ಪಾರ್ವತಿ ಅಪ್ಪಿದಂತೆ,
ಹೊಸ ಸೃಷ್ಟಿಗೆ ಒಪ್ಪಿದಂತೆ,
ಚಿಗುರಿತು ಈ ಹುಲುಗಲ!

ಯಾ ವಿಮಾನದಿಂದ ಬಂದು ಇಳಿದನೇನೊ ಚೈತ್ರ
ಬೇರಿನಿಂದ ತುದಿಯವರೆಗು ಮೂಕ ತಂತಿ ಮಿಡಿತ.
ಒಂದು ಇರುಳು, ಒಂದು ಬೆಳಗು, ಒಂದು ಸಂಜೆ ಕಳೆಯಿತು
ಹೇಗೊ ಒಂದು ನಸುಕಿನಲ್ಲಿ ಇದರ ಕನಸು ಫಲಿಸಿತು.

ಚಿಗುರಿ ಚಿಗುರಿ ಚಿಗುರಿ ಎದೆಯ ರಸವನೆಲ್ಲ ಚಿಮ್ಮಿತು,
ಬೆಳಗು, ಬೈಗು ತೊಳಗೆ ತನ್ನ ಅಂಗೈಯಲಿ ಕುಣಿಸಿತು;
ಹಸುರು ತೊಂಗಲಲ್ಲಿ ನೆಲವ ತಂಪಾಗಿಸಿ ಬಾಗಿತು,
ಹೂವು - ಮುಳ್ಳು ಹಾದಿಯಲ್ಲಿ 'ಶುಭಕೃತು'ವು ಸಾಗಿತು.

ಅದೇ ರಸ್ತೆ, ಅದೇ ಬಸ್ಸು, ಅದೇ ಧೂಳು ಇಂದಿಗು
ಅದೇ ಕೆರೆಯ ರಾಡಿನೀರು ಹಿತವಾಗಿದೆ ಮಂದೆಗು.
ಉರಿಯುತಿರುವ ಬಿಸಿಲಿನಲ್ಲಿ ತಣ್ಣಗಿಹುದು ಹುಲುಗಲ
ಮೈಯ ತುಂಬ ಹೂವಬಿಟ್ಟು ಕಾಯುತಿಹುದು ಹಂಬಲ.

ಗಾಳಿಯಲ್ಲಿ ಗಿಲಕು ಗಿಲಕು ಕಾಯಿಯಲ್ಲಿ ಬೀಜವು
'ಸಂಭವಾಮಿ ಯುಗೇ ಯುಗೇ' ಒಳಗಿನಮಲ ತೇಜವು.
ಈ ಮಣ್ಣಿನ ಮರೆಯೊಳೆಂಥ ಜೀವಸ್ಫೂರ್ತಿಯಡಗಿದೆ
ಇದರ ಒಂದು ಕಣ ಕಣವೂ ಹೊಸಸೃಷ್ಟಿಗೆ ತೊಡಗಿದೆ!

ಒಂದು ಪುಟ್ಟ ಹಕ್ಕಿಗೆ

೧

ಚಿಟ್ಟ ಗುಬ್ಬಿ ಪುಟ್ಟಗುಬ್ಬಿ
ಮುಳ್ಳು ಬೇಲಿಯನ್ನು ತಬ್ಬಿ
ಚೀರಿ ಚೀರಿ ಗಂಟಲುಬ್ಬಿ -
ಒಡೆಯುವಂತೆ ಹಾಡಿತು;

ಕೇಳಲಿಲ್ಲ ಜಗದ ಕಿವಿ
ನೋಡಲಿಲ್ಲ ಬಾನ ರವಿ
ನೀನಾದರು ಬಾರೊ ಕವಿ
ಎಂದು ಅಂಗಲಾಚಿತು;

ಹಗಲು ದಿಗಿಲುಗೊಳಿಸುತಿರಲಿ
ಸುಗ್ಗಿ ಹೋಗಿ ಮಾಗಿ ಬರಲಿ
'ಟಿವ್ವೂ ಟಿವ್ವೂ' ಎಂದು ಒರಲಿ
ಕೊರಗಿ ಸಣ್ಣಗಾಯಿತು;

ತೆನೆಯ ಹಾಲುಗಾಳನುಳಿದು
ಗಗನ ಗಮನವನ್ನು ಹಳಿದು
ಗೂಡಿನಲ್ಲಿ ಮೌನ ತಳೆದು
ರೆಕ್ಕೆ ಮುದುರಿ ಕುಳಿತಿತು.

೨

ಏಕೆ ಇಂತು ಉದಾಸೀನ
(ಸದಾಶಿವನಿಗದೇ ಧ್ಯಾನ)
ನಿನ್ನ ಬಾಳಿಗಾವ ಊನ
ಹೇಳು ಪುಟ್ಟ ಹಕ್ಕಿಯೆ?

ಜಗವಪಾರ ನಾದಧುನಿ
ನಿನ್ನ ಧ್ವನಿಯದೊಂದು ಹನಿ
ಅದನೆ ಹಾಡಿ ಹಾಡಿ ತಣಿ
ವಿಶ್ವವೀಣೆ ತಂತಿಯೆ.

ಜನತೆಯೊಂದು ಮೂಢ ಸಂತೆ
ಕಲಹ ಕಪಟ ಕಂತೆ ಕಂತೆ
ನಿನಗೇತಕೆ ಅದರ ಚಿಂತೆ
ಮುನ್ನಿನಂತೆ ನೀನಿರು;

ಬೆಳಕಿನೆಡೆಗೆ ಕಣ್ಣ ತೆರೆ
ಜಗವ ಕಾವನೊಬ್ಬ ದೊರೆ
ಒಪ್ಪಿಸವನಿಗೆಲ್ಲ ಹೊರೆ
ನಿನ್ನಷ್ಟಕೆ ಹಾಡಿರು.

ಮತ್ತೊಂದು ಪುಟ್ಟ ಹಕ್ಕಿಗೆ

ಎಲ್ಲಿಂದ ಬಂದೆ ನೀ ನನ್ನ ಮುದ್ದಿನ ಹಕ್ಕಿ?
ಹದುಳವೆನ್ನುವ ಮೊದಲೆ ಹಾರಬೇಡ;
ಒಂದು ಚಣವಾದರೂ ನನ್ನ ಬಳಿಯಲಿ ಕುಳಿತು
ಕುಶಲ ವಾರ್ತೆಯ ನಾಲ್ಕು ಮಾತನಾಡ.

ಎಂದಾದರೊಂದು ದಿನ ಅಂದಚಂದಕೆ ಬರುವೆ
ನೋಡನೋಡುತ ಪಕ್ಕ ಬೀಸಿ ಬಿಡುವೆ;
ನನ್ನ ಹೃದಯದ ಮಾತು ಹೃದಯದಲ್ಲಿಯೆ ಉಳಿಯೆ -
ಒಲವು ನಲವಿಗೆ ಸಂಚಕಾರ ಕೊಡುವೆ.

ನಿನ್ನ ಹಾಡಿನ ಮುಂದೆ ನನ್ನದೇತರ ಪಾಡು -
ನನ್ನ ಹಾಡಿಗು ನನಗು ಜನ್ಮಗಂಟು !
ನೀ ಕಂಡ ಬನದಲ್ಲಿ ಬಾನಿನಲಿ ಕಾನಿನಲಿ
ಇವಕು ಮೀರಿದ ಬೇರೆ ಭಾವವುಂಟು.

ನಿನ್ನ ಧ್ವನಿ ಸ್ವಚ್ಛಂದ ಆನಂದದುಕ್ಕಂದ
ಹೊಚ್ಚ ಹೊಸ ಮಳೆಯ ತನಿ ಸೆಳಕಿನಂತೆ;
ಹಚ್ಚ ಹಸುರಿನ ಬನದಿ ಗಿರಿಶಿಖರದಿಂದುರುಳಿ
ಹರಿವ ನದಿಯಲಿ ನಾದ ತುಳುಕಿದಂತೆ.

ಪುಟ್ಟ ಹಕ್ಕಿಯ ಇಂಥ ಪುಟ್ಟ ಎದೆಯೊಳದೆಂತು
ಗಾನಚಿಲುಮೆಯು ತಾನೆ ಚಿಮ್ಮುತಿಹುದೊ!
ಇಳೆಯ ಬಾಳಿನ ಸಾರಸರ್ವಸ್ವ ಸುಧೆಯೆಲ್ಲ
ಹಕ್ಕಿಕಂಠದೊಳಿಂತು ಹೊಮ್ಮುತಿಹುದೊ!

ಮೇಲೆ ನೀಲಾಂಬರದಿ ಮೋಡ ತೂಕಡಿಸುತಿವೆ
ನಿನ್ನ ಗಾಯನ ಸುರಾಪಾನದಲ್ಲಿ
ನಿನ್ನ ಧ್ವನಿ 'ಗೋ'ಯೆಂದು, 'ಆ' ಯೆಂದು, 'ಬಾ' ಯೆಂದು
ದಿಕ್ಕು ಕರೆ ಕರೆದಿಹವು ತಮ್ಮೊಳಲ್ಲಿ!

ಮರದುದಿಗೆ ಹೊಂಬಿಸಲ ಬಾವುಟವು ತೂಗಿಹುವುದು -
ಸೃಷ್ಟಿ ತಲೆದೂಗಿರಲು ಹೆಚ್ಚಿಗೇಕೆ?
ನನ್ನೆದೆಯು ಮೌನದಲಿ ಕರಗಿ ನೀರಾಗಿರಲು
ಆರಿಗಾರೋ ಎಂದು ಹಾರಲೇಕೆ?

ಏನಾದರೂ ಇರಲಿ, ಹಾಡ ನಿಲ್ಲಿಸಬೇಡ
ದೀಪ ಪಟ್ಟನೆ ಆರಿ ಹೋಗಬಹುದು !
ನನ್ನೆದೆಯ ಕತ್ತಲೆಯ ಕಣ್ಣುಕಪ್ಪಡಿ ಮತ್ತೆ
ಮೂಲೆ ಮೂಲೆಗೆ ಹೋಗಿ ಹಾಯಬಹುದು!

ಬದುಕು ಸೋಲಾದರೂ ಕಾಡು ಪಾಲಾದರೂ
ಹಾಡ ಬಿಟ್ಟುಳಿದವನ ಪಾಡು ಬೇಡ:
ನೀನೆನ್ನ ದೈವತವು ಹಾಡೆನ್ನಜೀವಿತವು
ಮತ್ತೆ ಮತ್ತುಳಿದವರ ಮಾತುಬೇಡ.

ಉಷೆಯ ಗೆಳತಿ

ಏಳೆನ್ನ ಮನದನ್ನೆ, ಏಳು ಮುದ್ದಿನ ಕನ್ನೆ
ಏಳು ಮಂಗಳದಾಯಿ ಉಷೆಯ ಗೆಳತಿ -
ಏಳು ಮುತ್ತಿನ ಚೆಂಡೆ, ಏಳು ಮಲ್ಲಿಗೆ ದಂಡೆ
ಏಳು ಬಣ್ಣದ ಬಿಲ್ಲೆ ಮಾಟಗಾತಿ!

ಏಳೆನ್ನ ಕಲ್ಯಾಣಿ, ಏಳು ಭಾವದ ರಾಣಿ
ನೋಡು ಮೂಡಲದಲ್ಲಿ ರಾಗಮಿಲನ !
ಮರದುದಿಯ ತೋರಣದಿ ಹೊಂಬಿಸಿಲ ಬಾವುಟವು
ಗಾಳಿವಟ್ಟೆಯಲದರ ಚಲನವಲನ.

ಏಳು ಬಾಳಿನ ಕೊಳಲೆ, ಸರಳಸುಂದರ ತರಳೆ
ಹಕ್ಕಿ ಹಾಡಿಗೆ ಮಧುರ ದನಿಗೂಡಿಸು;
ಹೂವು-ಹಾಸಿಗೆಯಿಂದ ಬಂದ ಸೂಸಲ ಗಾಳಿ
ಪಿಸು ಮಾತನಾಡುತಿದೆ ನಸು ಆಲಿಸು.

ಮಂಜಿನರಳೆಯ ಹಿಂಜಿ ತೂರುತಿಹ ನೇಸರನು
ಹಿಮಮಣಿಯ ದರ್ಪಣದಿ ತನ್ನ ಕಂಡು
ಮಿರುಗಿ ಹೋಗರೇರಿಹನು! ಏಳೆನ್ನ ಹೊಂಗೆಳತಿ
ಮೊಗದ ಜವನಿಕೆ ತೆರೆದು ನಗೆಯ ನೀಡು.

ಲಲಿತ ಶೃಂಗಾರ ರಸಪೂರ್ಣೆ ಚಂದಿರವರ್ಣೆ
ದೃಷ್ಟಿ ತೆಗೆಯಲು ಒಂದು ಮುತ್ತನಿಡುವೆ;
ನಿನ್ನ ಸಕ್ಕರೆ ನಿದ್ದೆ ಸವಿಗನಸ ಕತೆ ಹೇಳು
ಒಂದು ಚಣ ಜಗವನ್ನೆ ಮರೆತು ಬಿಡುವೆ.

ನಿರೀಕ್ಷೆ

ಮನೆಯ ಮಂಗಳಮೂರ್ತಿ ಮೌನದಾಳದಿ ಮುಳುಗಿ
ಕಣ್ಣ ರತ್ನದ ಖಣಿಯ ದೀಪಿಸಿಹಳು -
'ಸಂಜೆಯಾಯಿತು ಈಗ ಬಂದೆ ಬರುವರು' ಎಂದು
ಒಂದೆ ಚಿಕ್ಕೆಯ ತೆರದಿ ಜಾನಿಸಿಹಳು.

ತುಂಬುಗೈ ಬಾಗಿಲಿಗೆ ಇಂಬುಗೊಟ್ಟಿದೆ, ಕಾಲ
ತುದಿಬೆರಳು ಹೊಸತಿಲಕೆ ಹೂವಾಗಿದೆ!
ನೆಟ್ಟ ದಿಟ್ಟಿಯು ದಾರಿ ನೋಡಿ ನಿಟ್ಟುಸಿರಿಡಲು -
ಜಡೆಯುದ್ದಕ್ಕೂ ಚಿಂತೆ ಹೊಯ್ದಾಡಿದೆ!

ಏನೊ ನೆನಪಾದಂತೆ ಒಳಗೆ ಮೆಲ್ಲಗೆ ನುಸುಳಿ
ದೀಪವಂಟಿಸಿ ಸುಪ್ರಸನ್ನ ಮೊಗದಿ
ಚೆನ್ನೆ! ಹೆಜ್ಜೆಯ ಗುರುತನೆಂದೊ ಅರಿತವಳಂತೆ
ಬಂದೆ ಬರುವಳು ಇದಿರುಗೊಂಬ ಭರದಿ.

ಹಗಲುಗನಸೇ ಮಾಗಿ, ಬೈಗು ಸುಂದರವಾಗಿ
ಪೂರ್ಣಗೊಂಡಿದೆ ಬಾನ ಸ್ವರ್ಣನಕ್ಷೆ ;
ಹೆಣ್ಣು ಜೀವದ ಹಲವು ಬಯಕೆ ಬಣ್ಣವ ಕೂಡಿ
ಮೂಡಿ ನಿಂತಂತಿಹುದು ಈ ನಿರೀಕ್ಷೆ.

ಸ್ನಿಗ್ಧನೋಟದೊಳಖಿಲ ಬ್ರಹ್ಮಾಂಡ ಮಿದುಗೊಂಡು
ಮೆಲಿತು ನಲ್ಬಾತಿನಲಿ ತೇಲುತಿಹುದು -
ಬಾನು ಬುವಿಗಳ ತುಟಿಗೆ ಹುಣ್ಣಿಮೆಯ ಮುತ್ತಿಟ್ಟು
ಬರುವ ಬೆಳದಿಂಗಳವ ಹೋಲುತಿಹುದು.

ಪಡುವಣದ ಸಂಜೆವೆಣ್ ನಡುಮನೆಗೆ ಬಂದಂತೆ
ರಾಗಪುಲಕಿತೆ ಎದೆಯನಾಳುತಿಹಳು -
ಮಳೆಬಂದ ಮರುಚಣದ ಇಳೆಯ ಹೊಸತನದಂತೆ
ಅಡಿಗಡಿಗು ಈ ಬಾಳ ಬೆಳಗುತಿಹಳು

ಮೌನಭಾರ

ತುದಿಬೆರಳಲೆನ್ನ ಗಲ್ಲವ ಪಿಡಿದು ಮುದ್ದಿನಲಿ
'ಮುದ್ದು, ಚಿನ್ನಾ' ಎಂದು ಕರೆಯುವವರು,
ಕುರುಳ ತಿದ್ದುತ ಹೆರಳಮಾಲೆಯನು ನೇರ್ಪಡಿಸಿ
'ಮಲ್ಲಿಗೆಯೆ ಮಾತಾಡು' ಎನ್ನುವವರು.

ಕಂಕಣದ ಕಿಂಕಿಣಿಯ ದನಿಯನಾಲಿಸಿ ಬಂದು
ಸಪ್ಪಳಿಲ್ಲದೆ ಎದೆಯನಪ್ಪುವವರು,
ಜೇನು ಹಾಡಿಗೆ ಮನವ ಮಾರುಗೊಂಡೈತಂದು
ಮುತ್ತು - ಸವಿಗೆಂದಿಗೂ ತಪ್ಪದವರು.

ನಕ್ಕು ನಗಿಸುತ ಮನೆಯ ತುಂಬಿ ತುಳುಕಿಸುವವರು
ಅಕ್ಕರೆಯ ಸಂತೋಷ ಲಹರಿಯವರು;
ಒಂದೆ ಕಂಬನಿಯಲ್ಲಿ ಕರಗಿ ನೀರಾಗುವರು
ನವಿರು ನವಿರೊಳು ನಲ್ಮೆ ಚಿಮ್ಮುವವರು, -

ಇಂದಾವ ಬೇಸರವು ಎದೆಯನಾವರಿಸಿಹುದು
ನಿಮ್ಮ ಪಾಲಿಗೆ ಮೌನ ಬಂದುದೇಕೆ?
ಗಿರಿಯ ಗಂಭೀರತೆಗೆ ಮನೆಯೆ ಬಿಮ್ಮೆಂದಿಹುದು -
ನವಿಲು ಮರೆತಂತಿಹುದು ತನ್ನ ಕೇಕೆ.

ಸರಸ ಸಲ್ಲಾಪಗಳ ಸರಸಿ ಬತ್ತುತಲಿರಲು
ಈ ಸರೋಜಕೆ ಬೇರೆ ಜೀವವಿಹುದೆ?
ಒಪ್ಪವಾಗಿದ್ದವರು ಸಪ್ಪೆಮುಖ ಮಾಡಿರಲು -
ಎಳೆದ ತಂದಿಹ ನಗೆಯು ಚಂದವಹುದೆ?

ನೀವು ಮರುಗಿದರೆನ್ನ ಜೀವಕ್ಕೆ ತಂಪಿಹುದೆ?
ನಸುಮುನಿಸಿಗೂ ನೆಲಕೆ ಇಳಿದುಬಿಡುವೆ -
ಬಂದುದೆಲ್ಲವು ಬರಲಿ, ನಗೆಯು ಚಿರವಾಗಿರಲಿ
ಇಂದ್ರಲೋಕವನಿಲ್ಲಿಗಳೆದು ತರುವೆ!

ಬಾನ ಬೀದಿಯೊಳಲ್ಲಿ, ಹುಣ್ಣಿಮೆಯ ರಥದಲ್ಲಿ
ಚಂದ್ರನೊಸಗೆಯು ಬಾರ ಬಾ ಚಕೋರ,
ಕಣ್ಣು ಕಾತರಿಸಿಹವು, ಎದೆಯು ಹಾರೈಸಿಹುದು
ತಾಳಲಾರೆನು ಇನ್ನು ಮೌನಭಾರ !

ಮಿಲನ

ಎರಡೆದೆಗಳು ತುಡಿಯುತ್ತಿವೆ ಪ್ರೇಮಾಂಬುಧಿಗೆಳಸಿ
ಆ ಗಂಗಾ ಯಮುನೆಯರೊಲು ಚಿರ ಸಂಗಮ ಬಯಸಿ.

ನಡುದಾರಿಗೆ ಅಡ್ಡೈಸಿವೆ ಗುಡುಗಾಡಿವೆ ಮುಗಿಲು
ಹೆಡೆಯೆತ್ತುತ ಫೂತ್ಕರಿಸಿದೆ ಬಿರುಗಾಳಿಯ ಹುಯಿಲು.

ನಿಡು ಬಯಕೆಯ ಹಿಂದೂಡಿರೆ ಹರಿಗಡಿಸಿರೆ ಸೋಲು
ಗಿರಿದರಿಗಳು ಅಪ್ಪಳಿಸಿರೆ ತಿರುಗಣೆಯೊಲು ಹೊನಲು !

ಕಟ್ಟಳೆಗಳ ಕಟ್ಟೊಡೆಯುತ ಸ್ವಚ್ಛಂದದಿ ನಲಿವೆ -
ಎನ್ನುತ ಹಿರಿಯೊಲವಿನ ಝರಿ ಹರಿದಿರಲೇಗೈವೆ?

ಸವಿಯೊಲುಮೆಗೆ ರಂಗೆರಚಿದೆ ಬಾಂಬಿಲ್ಲಿನ ಬಣ್ಣ
ಮುಂಬಾಳಿಗೆ ಬಾಂಬಟ್ಟೆಯು ತೆರೆದಂತಿದೆ ಕಣ್ಣ!

ಬಾನವರನು ಬಿಟ್ಟೋಡುತ ಮಾನವರೆದೆ ಸೇರಿ
ವಿದ್ಯುನ್ನಟಿ ಇಳೆಗಿಳಿದಳೊ ಮಿಂಚಿನ ನಗೆ ಬೀರಿ!

ಹೆಣ್ಣಿನ ಕಣ್ಣಂಚಿನಲಿದೆ ಕಡೆಗಾಣದ ಆಶೆ
ಆ ಕಾಂತಿಯು ತಾರಾಪಥದೆಡೆಗೊಯ್ಯುವದೈಸೆ?

ಸವಿಸೊಲ್ಲಿಗೆ ನಗೆಮಲ್ಲಿಗೆ ಸಖಿ ಜೀವದ ಕಾಣ್ಕೆ
ರೋಮಾಂಚನ ಪಡೆದಂತಿದೆ ಹಸಿರುಟ್ಟಿಹ ನೆಲಕೆ!

ಪಂಜರದಲಿ ಅಗವಟ್ಟಿಹ ಗಿಳಿಗೆಲ್ಲಿದೆ ತ್ರಾಣ?
ಪಕ್ಕದಲಿಹ ರೆಕ್ಕೆಗಳಲಿ ಬಿಕ್ಕಳಿಸಿದೆ ಪ್ರಾಣ !

ಬಾನಾಡಿಯ ನುಣ್‌ಗೊರಲಿಗೆ ಗುಡ್ಡಿಗಟ್ಟಿವೆ ದಿಕ್ಕು
ಎದೆ ಗೂಡಿನ ಗೆಡೆವಕ್ಕಿಗೆ ಬಹುದೆಂದಿಗೆ ಉಕ್ಕು?

ಓ ಎಂದಿಗೆ! ಇನ್ನೆಂದಿಗೆ ನೋಂತರ ಸಮ್ಮಿಲನ ?
ಹೊಸಬಾಳಿನ ಹೊಸಹಾಡಿಗೆ ರಸಮಯ ಸಂಸ್ಕರಣ?

ನಲ್ಮೆ

“ನಿನ್ನೆದೆಯ ಜೇನ ನೀಡುವ ನಲ್ಮೆಯಿಂದೆನ್ನ
ಒಲಿಸಿ ಮೀಸಲು ನಗೆಯ ಸೂಸಿ ಕರೆದೆ ;
ಇಂದೇಕೆ ಮೊಗಬಾಡಿ ವಿಹ್ವಲ ವಿಕಾರದಲಿ
ನಿಂದಿರುವೆ ಚೆಂದುಳ್ಳ ಮಧುರ ಹೂವೆ?”

“ಬೇರೊಂದು ದುರುದುಂಬಿ ಕೆಟ್ಟಗಾಳಿಯ ಸುಳಿಗೆ
ಬಂದೆನ್ನ ಬಲುಮೆಯಲಿ ಬಲಿಗೊಂಡಿತು;
ಅಯ್ಯೊ ಆ ವಿಷನಿಮಿಷ ! ಮೈಯೆಲ್ಲ ಉರಿಯುತಿದೆ
ಅಬಲೆಯೆಂದೆನೆ - ಸಾವು ಬೇಕಾಯಿತು!”

ತುಂಬಿ ಮೊರೆಯಿತು ಮರೆಯಲಾರೆನೆಂದು
ನೊಂದ ಹೂ ಕಳಚಿತ್ತು ಎದೆಯು ಬೆಂದು;
ಗಾಳಿ ಗೋಳಿಡೆ ಹಾಡೆ ಚರಮಗೀತ
ಮುಗಿಲ ಹೆಗಲೇರಿ ಸಾಗಿತ್ತು ಪ್ರೇತ!

ಆನಿ ಬಂತವ್ವಾಽಽನಿ

ಆನಿ ಬಂತವ್ವ ಆಽನಿ
ಇದು ಎಲ್ಲಿತ್ತವ್ವ ಮರಿಯಾನಿ ||
ಕಳ್ಳಿಸಾಲಾಗ ಮುಳ್ಳ ಬೇಲ್ಯಾಗ
ಓಡಿಯಾಡತಿತ್ತಾಽನಿ,
ಕಾಲ ಮ್ಯಾಲ ಅಂಗಾತ ಮಲಗಿ
ತೂರನ್ನತೈತಿ ಈ ಆಽನಿ!
ಎಂಥ ಚಿಟ್ಯಾನಿ
ನನ್ನಕಟ್ಟಾಣಿ
ಇದಕ ಯಾರಿಲ್ಲ ಹವಽಣಿ
ಆನಿ ಬಂತವ್ವ ಆಽನಿ.
ಅಡವಿ ಕಡೆಯಿಂದ ಹಿಂಡಿನೊಳಗಿಂದ
ದುಂಡಗುರುಳಿ ಬಂತಽ
ದಾರಿ ಮಂದೆಲ್ಲ ಮೀರಿ ತುಡುಕಿದರ
ಕೊಸರಿಕೊಂಡು ಬಂತುಽ
ನನ್ನ ಬಂಗಾರ
ಮುದ್ದು ಸಿಂಗಾರ
ಬಾರ ನನ್ನ ಕುವರಾ
ಒರಸತೇನಿ ಬೆವರಾ ;
ನಿನ್ನ ನೋಡಿ ಮುದ್ದಾಡಿ ಹಾಡಿ
ಅಪ್ಪಿದರ ದುಃಖ ಹಗುರಾ
ಅಪ್ಪಿದರ ದುಃಖ ಹಗುರಾ;
ಮರದ ಕೊಂಬಿಯನು ಮುರಿದು ಚೆಲ್ಲುವಾ
ಸೊಂಡಿ ಇಲ್ಲ ಇದಕಽ
ತಳಿರ ಕೈಯಿಂದ ಕೊರಳನಪ್ಪಿದರ
ಸುಗ್ಗಿ ಹಾಂಗ ಬದುಕಽ.

ನನ್ನ ಕಂದ
ದಿನಕೊಂದು ಚಂದ
ಭವ ಬಂಧ ಬಿಡಿಸ ಬಂದs
ಮನಿ ತುಂಬ ಇದರ ಗಂಧs
ತೊದಲು ತುಟಿಗೆ ತಪ್ಪೆಜ್ಜಿ ಹಾಕಿ
ಬರತೈತಿ ಓಡಿ ಓಟ,

ಬಂದು ಸೆರಗ ಮರೆಯಲ್ಲಿ ಅವಿತು
ಹುಡುಹುಡುಕವಾಟ ಮಾಟ.

ಆನಿ ಬಂತು ಅರಸಾನಿ ಬಂತು
ದೊರೆಸಾನಿ ಬಳಿಗೆ ಬಂತು;
ನನ್ನ ಅರಸರಾ ಪಟ್ಟದಾನಿ ಇದು
ಬಾಳ ಗುಟ್ಟ ತಂತು.
ನನ್ನೊಡಲ ಜೀವ ಜೀವಾಳದಾಗ
ಚಂದ್ರಾಮನಾಗಿ ನಿಂತು,
ಹುಣ್ಣಿವಿ ದಿನದ ಬೆಳದಿಂಗಳ್ಹಾಂಗ
ಕುಡಿಲಾಕ ಬಂತ ಬಂತು.
ಆಕಾಶದಾಗ ಚಿಕ್ಕೀಯ ಚಟ್ಟು
ಕಟ್ಟೇತಿ ನಿನಗ ಬಾಳಾ
ಜಗವು ತೊಟ್ಟಿಲಾ, ಚಂದ್ರ ಬಟ್ಟಲಾ
ತುಂಬ ಹಾಲ ಕೊಡುವಾ
ದೇವರಲ್ಲ ಬಡವಾ.
ಜಾಜೀಯ ಬಳ್ಳಿ ಕುಡಿಗ್ಯೆಯ ಚಾಚಿ
ನೀಡೇತಿ ನಿನಗ ಹೂವಾ
ನಿನ ಮ್ಯಾಲ ಅದರ ಜೀವಾ.
ಬಡಕೊಂಡ ಜೀವ ಉಳಕೊಂಡು ಹೇಗೊ
ನಿಂತೈತಿ ಕುಡಿದು ವಿರಸಾ

ನೀನೇನ ಪಡೆದು ಬಂದೀಯೊ ಏನೊ
ನೀ ನನ್ನ ಕನಸ ಮಾನಸಾ.

ಯಾರಾರ ದೃಷ್ಟಿ ಬಡಿದೀತು ಬಾರೊ
ಚಂದ್ರಾಮ ಚೆಲುವ ನೀನು.
ಹಾಲುಗಲ್ಲದಾ ಹಸುಳೆ ತಾಯಿ,
ಸುರಿದೀತು ಜೊಲ್ಲು - ಜೇನು.

ಬಾ ಬಾರೋ ಕಂದ
ಏನಂದ ಚೆಂದ!
ಬಾ ಇಂದ್ರ ಪಟ್ಟದಾನಿ
ದುಡು ದುಡೂ ಬಂದು
ಕಾಲಾಗ ನಿಂತು
ತೂರ್‍ಯಾಡು ಆನಿಯಾಡು.

ಗಿರಿಗಿರಿ ಗಿಂಡಿ

೧

ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ
ಸಂಜೆಯ ಗಾಳಿ
ತಂಪೊಳು ತೇಲಿ
ಗರಿಗರಿ ಮೋಡ
ಬಾನಿನ ಕೂಡ
ಮೈಮರೆತೋಟ
ಚಿಕ್ಕಂದಾಟ;
ಬಣ್ಣದ ಹಕ್ಕಿ
ಕೊರಳಲ್ಲುಕ್ಕಿ
ಸುವ್ವೀ ಚವ್ವಿ
ಹಾಡಿದೆ 'ಟುವ್ವಿ',
ಬನ ಬನದಲ್ಲಿ
ಮನ ಮನದಲ್ಲಿ
ಸಂತಸ ಬೀರಿ
ಹಾಡಿನ ಲಹರಿ
ಮೆಲ್ಲಗೆ ನಿಂತಿ
ಬಾರೇ ಗೆಳತಿ
ಗಿರಿಗಿರಿ ಗಿಂಡಿ.
ಇಬತ್ತಿ ಉಂಡಿ.

೨

ಬಗಾಟ ಬಗರಿ
ತಿರುಗುವ ತಿಗರಿ
ತೆಂಗಿನ ಚವರಿ
ಗಾಳಿ ಸವಾರಿ

ಹಿತ್ತಲದಲ್ಲಿ
ಕುಂಬಳ ಬಳ್ಳಿ
ಅಂಗಳದಲ್ಲಿ
ಹೂ ಗಿಡಬಳ್ಳಿ
ಮುಂಗಡೆಯಲ್ಲಿ
ಬೇಲಿಯ ಕಳ್ಳಿ
ಬಳಿಯಲಿ ಸುಳಿದು
ಬೇಸರ ಕಳೆದು
ಪಾತರಗಿತ್ತಿ
ಪಕ್ಕಾಹತ್ತಿ
ಮೈಕೈ ತುಂಬ
ಹೂ ಮಕರಂದ
ಮಂಜಿನ ಹನಿಯ
ಮುತ್ತಿನ ತೆನಿಯ
ಹುಲ್ಲಿನ ವಸತಿ
ಕುಸುಮ ಕಸೂತಿ.
ಕಾಮನ ಬಿಲ್ಲ
ಮೂಡಿಹುದಲ್ಲ!
ರೇಶಿಮೆ ಅಂಚ
ಮಿರಿ ಮಿರಿ ಮಿಂಚ
ಬಣ್ಣದ ಕುಂಚ
ಯಾರದು ಹೊಂಚ?
ಬಲಗೈ ತಾರ
ಎಡಗೈ ತಾರ
ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ.

೩

ಕಂಬಕಂಬಾಟ

ನಿಂಬಿಯ ತೋಟ
ನವಿಲಿನ ಓಟ
ತಕಥೈ ಥಾಟ
ಗೆಳತಿಯರೆಲ್ಲ
ಬಂದಾರೇನ
ಗುಲಾಬಿ ಲಂಗ
ಉಟ್ಟಾರೇನ
ನೀಲಿ ಪೋಲಕ
ತೊಟ್ಟಾರೇನ
ನತ್ತು ಬುಗುಡಿ
ಇಟ್ಟಾರೇನ
ಚಿನ್ನದ ಬಳೆಗೆ
ಅತ್ತಾರೇನ?
ಬಾರೇ ಗೆಳತಿ
ನನ ಬಂಗಾರಿ
ವಸಂತ ಕಾಲದ
ಸಿರಿ ಸಿಂಗಾರಿ
ಮಾವಿನ ತಳಿರು
ಹುಣಿಸೆಯ ಚಿಗುರು
ಗಾಳಿಯ ಸುಳಿಗೆ
ಕುಣಿತದ ಕರೆಗೆ
ತಲೆಯನು ತೂಗಿ
ಮನಕಿಂಬಾಗಿ
ರವದೆಯ ಪೀಪಿ
ಊದುವದೇನ
ಹರುಷದ ಕೇಕಿ
ಹಾಕುವದೇನ?
ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ.

೪

ನಗೆ ಮೊಗದಲ್ಲಿ
ಹರುಷದ ಬಳ್ಳಿ
ಕೋಮಲವೆನಿಸಿ
ರಾಗವ ರಚಿಸಿ
ತುಟಿಯಲಿ ಚಿಗುರಿ
ಗಲ್ಲದಲರಳಿ
ಕುರುಳಲಿ ಹೊರಳಿ
ಜಡೆಯಲಿ ತೂಗಿ
ಬಿಂಕದಿ ಬೀಗಿ
ನಿರಿ ಚೆಲ್ಲಾಟ
ಕೋಗಿಲೆ ಕುಕಿಲು
ತೆರೆ ಚಿನ್ನಾಟ;
ದಿನದಿನಕೊಂದು
ಹೊಸತನ ಬಂದು
ಸೆರಗನು ಹೊಚ್ಚಿ
ಕಣ್ಣೆವೆ ಮುಚ್ಚಿ
ತೆರೆ ತೆರೆವಂತೆ
ಚೆಲುವಿನ ಸಂತೆ!
ಕಣ್ಣಿನ ತುಂಬ
ಕನಸಿನ ಬಿಂಬ
ಜೀವದ ಗೆಳತಿ
ಒಲವಿನ ಒರತಿ
ಇತ್ತತ ಬಾರ
ಇದಿರಿಗೆ ಬಾರ
ಬಲಗೈ ತಾರ
ಎಡಗೈ ತಾರ
ಗಿರಿಗಿರಿ ಗಿಂಡಿ
ಇಬತ್ತಿ ಉಂಡಿ.

ಸಂಕ್ರಾಂತಿ ಗೀತ

ಎಳ್ಳೀಗೆ ಎಣ್ಣೀಗೆ, ಮಿಂಚುವ ಕಣ್ಣೀಗೆ
ಹಂಚುವ ಬೆಲ್ಲದ ಕಣ್ಣಿಯಿದೆ.
ಮಿರಿಮಿರಿ ಮಿಂಚುವ ಸೀರೆಯು ಕುಪ್ಪಸ
ತರತರದೊಡವೆಯ ಬಣ್ಣವಿದೆ.
ಎಳೆಯರು ಗೆಳೆಯರು, ಕುಲುಕುಲು ನಗುವರು
ಕಲಕಲ ಹಚ್ಚಿದ ಹೆಂಗಸರು;
ಹಳಬರು, ಹೊಸಬರು, ಮಕ್ಕಳು ಮರಿಗಳು
ಚಕ್ಕಂದವಾಡುತ ಕುಳಿತಿಹರು.

ಹಳ್ಳೀಗೆ ದಿಳ್ಳೀಗೆ ಬಳ್ಳಿ ಬಳ್ಳೀಯಾಗಿ
ನೇಹದ ನೆಂಟನು ಸುರಿದವರು
ಹಸುರೀಗೆ ಕುಸುರೀಗೆ ಹಲವಾರು ಹೆಸರಿಗೆ
ಪ್ರೀತಿಯ ಮಳೆಯನು ಕರೆದವರು.
ಎಳ್ಳು-ಬೆಲ್ಲಾ ಕೊಳ್ಳಿ, ಒಳ್ಳೊಳ್ಳೆ ಮಾತಾಡಿ
ಸುಳ್ಳಿಗೆ ಸೊಟರಿಗೆ ಕಿವಿಗೊಡದೆ.
ಕಳ್ಳು -ಬಳ್ಳೀಗೊಗೆದ ಹೂವಾಗಿ ಬಾಳೋಣ
ಜಳ್ಳನು ಗಾಳಿಗೆ ತೂರೋಣ.

ಎಳ್ಳಿಗೆ ಎಣ್ಣಿಗೆ ಮಿಂಚುವ ಕಣ್ಣಿಗೆ
ಹಂಚುವ ಬೆಲ್ಲದ ಕಣ್ಣಿಯಿದೆ.
ತಮಿಳಿನ ಪೊಂಗಲ, ನಾಡಿಗೆ ಮಂಗಲ
ಹಾಲು ಬೆಲ್ಲದಕ್ಕಿ ಪಾಯಸವು,
ಸಕ್ಕದವಾದರು ಸಂಕ್ರಾಂತಿ ಕನ್ನಡ -
ಹತ್ತು ದೀನಸಿನಡಿಗೆ ಹೊಸ ರುಚಿಯು.

ಬಾಲ್ಯಽದ ಚಿಗುಳೀಯ, ಹರೆಯಽದ ಮರೆಯಽದ
ಒನಪು ಒಯ್ಯ್ಯಾಽರದ ಸಂಗತಿಯ
ನೆನೆಯೂತ ನಲಿಯೋಣ, ಹೊಸತೆಲ್ಲ ಕಲಿಯೋಣ
ಸಂಸಾರದೊಗಟನ್ನು ಒಡೆಯೋಽಣ.

ಎಳ್ಳಿಽಗೆ ಎಣ್ಣೆಽಗೆ ಮಿಂಚುವ ಕಣ್ಣೆಽಗೆ
ಹಂಚುಽವ ಬೆಲ್ಲದ ಕಣ್ಣೆಯಿದೆ.
ಎಳ್ಳು-ಬೆಲ್ಲಾ ಕೊಳ್ಳಿ, ಒಳ್ಳೊಳ್ಳೆ ಮಾತಾಡಿ
ಸುಳ್ಳಿಽಗೆ ಸೊಟರಿಽಗೆ ಕಿವಿಗೊಡದೆ.

ಮೊದಲ ಚರಣಗಳ ಅಕಾರಾದಿ

ಚೆನ್ನವೀರ ಕಣವಿ ಕನ್ನಡದ ಬಹುಮುಖ್ಯ ಕವಿಗಳಲ್ಲಿ ಒಬ್ಬರು. ಕಾವ್ಯವನ್ನು ಒಂದು ವ್ರತವಾಗಿ ಸ್ವೀಕರಿಸಿದವರೂ ಹೌದು. ಮೃದುಮನಸ್ಸು, ಭಾವುಕಹೃದಯ ಇವು ಸ್ಥಾಯೀಭೂತವಾಗಿ ಅವರಲ್ಲಿ ಕುಳಿತು ಮೃದುಮಧುರ 'ವಚನರಚನೆ'ಯ ಸಮ್ಮೋಹನ ಜಾಲದಲ್ಲಿ ತಮ್ಮ ಕವಿತೆಯನ್ನು ನೇಯ್ದರೂ ಎಚ್ಚರ ಹಾಗೂ ಅತ್ಯುತ್ತಮ ಶಕ್ತಕವಿತೆಗಳನ್ನು ನೀಡಿರುವುದನ್ನು ನಾವು ಮರೆಯುವಂತಿಲ್ಲ. ಸಂಕೀರ್ಣತೆ ಹಾಗೂ ಸರಳತೆ ಎರಡನ್ನೂ ತಮ್ಮ ಕಾವ್ಯೋದ್ಯೋಗದಲ್ಲಿ ತಾಂತ್ರಿಕಪರಿಣತಿ ಪಡೆದದ್ದು ಮುಖ್ಯಸಂಗತಿಯೆಂದು ನನಗನ್ನಿಸುತ್ತದೆ.

ತಮ್ಮ ಹಿಂದಿನ ಕವಿತೆಗಳಿಂದ ಆಯ್ದ ಭಾವಗೀತೆಗಳನ್ನು ಇಲ್ಲಿ ಸಂಕಲಿಸಿ ಕೊಟ್ಟಿದ್ದಾರೆ. ಸರಳತೆ, ಸೂಕ್ಷ್ಮಮನಸ್ಸಿನ ಹೃದಯಾಂತರಾಳದ ನವಿರನ್ನು ಪಡೆದಿರುವುದು ಇಲ್ಲಿಯ ಒಳಮ್ಮೆ ಸಂಗತಿ. ಆದರೆ ವಸ್ತುನಿರ್ವಹಣೆಯಲ್ಲಿ ವ್ಯಕ್ತಿ, ಪ್ರಕೃತಿ, ಮನಸ್ಸಿನ ತುಮುಲ ಭಾವನೆಗಳಿಗೆಲ್ಲ ಶಬ್ದಮಯ ಶಕ್ತಿಯನ್ನು ಗಾಢವಾಗಿ ನೀಡಿದ್ದಾರೆ. ಈ ಸಂಕಲನದ ಭಾವಗೀತೆಗಳು ತಮ್ಮ ಅಪೂರ್ವವಾದ ಅರ್ಥಮಾಧುರ್ಯ ಶಬ್ದನಾವಿನ್ಯ ಕೋಮಲರಚನೆ ಹಾಗೂ ವಸ್ತುಸಂಕೀರ್ಣತೆಯಿಂದ ಹೆಚ್ಚು ಅರ್ಥಪೂರ್ಣತೆಯನ್ನು ಪಡೆದಿವೆ. ಈ ಸಂಕಲನದ ಹೆಸರು ಪಡೆದ ಕವಿತೆಯಂತೂ ಮನೋಜ್ಞವಾಗಿದೆ. ಕನ್ನಡದ ಮುಖ್ಯಕವಿಗಳಲ್ಲಿ ಕಾಣಿಸಿಕೊಳ್ಳುವ ಭಾವಗೀತೆಗಳೊಡನೆ ಈ ಕವಿತೆಯನ್ನು ತುಲನೆ ಮಾಡಿ ಸಂಶ್ಲೇಷಿಸುವ ಅಗತ್ಯವಿದೆ.

ಓದು ಮತ್ತು ಹಾಡುಗಾರಿಕೆ ಈ ಎರಡೂ ಬಗೆಯ ಜನಸಮೂಹದ ಹೃದಯಸಂವಾದವನ್ನು ಈ ಸಂಕಲನವು ಪಡೆದಿದೆ. ಇದು ಕುತೂಹಲಕರವಾದರೂ ಸತ್ಯಸಂಗತಿ.

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ
ಕನ್ನಡ ಪ್ರಭ । 10.4.88

ತಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ, ಬೆಂಗಳೂರು